# ದಿನಾಂಕ:30-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (02)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ರಮೇಶ್.ಎನ್.ಆರ್. ನಗರ ಪಾಲಿಕೆ ಸದಸ್ಯರು ದಿನಾಂಕ: 07-02-2011 ರಂದು ಪೂಜ್ಯ ಮಹಾಪೌರರು ಹಾಗೂ ಆಯುಕ್ತರವರಿಗೆ, ಮನವಿ ಪತ್ರವನ್ನು ಸಲ್ಲಿಸಿ ವಾರ್ಡ್ ಸಂಖ್ಯೆ: 167 ರ ವ್ಯಾಪ್ತಿಯಲ್ಲಿ ಬರುವ ಟಾಟಾ ಸಿಲ್ಕ್ ಫಾರಂ ಬಡಾವಣೆಯ ಕೆ.ಆರ್.ರಸ್ತೆಯಲ್ಲಿರುವ ಕಂಠೀರವ ಗರಡಿ ಮನೆಯ ಮುಂಭಾಗದಲ್ಲಿರುವ ವೃತ್ತಕ್ಕೆ "ಶ್ರೀ. ಓಬಳಪ್ಪ ವೃತ್ತ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಶ್ರೀ. ಓಬಳಪ್ಪ ರವರ ಹೆಸರನ್ನು ನಾಮಕರಣ ಮಾಡಲು ಉದ್ದೇಶಿಸಲಾಗಿರುವ ಪ್ರದೇಶದಲ್ಲಿ ಸದರಿಯವರು ಜಮೀನ್ದಾರರಾಗಿದ್ದು, ಸಾರ್ವಜನಿಕ ಸೇವೆಯನ್ನು ಸಲ್ಲಿಸಿದ್ದು, ಪ್ರಸ್ತುತ ಸದರಿಯವರು ದಿವಂಗತರಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 32 ಮಂದಿ, ವಿರೋಧವಾಗಿ ಯಾರು ಸಹಿ ಮಾಡದೇ ಇರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293 ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಠ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ, ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದೆಂದು ಉಲ್ಲೇಖಿಸಲಾಗಿದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 167 ರ ವ್ಯಾಪ್ತಿಯಲ್ಲಿ ಬರುವ ಟಾಟಾ ಸಿಲ್ಕ್ ಫಾರಂ ಬಡಾವಣೆ, ಕೆ.ಆರ್.ರಸ್ತೆಯಲ್ಲಿರುವ ಕಂಠೀರವ ಗರಡಿ ಮನೆಯ ಮುಂಭಾಗದಲ್ಲಿರುವ ವೃತ್ತಕ್ಕೆ "ಶ್ರೀ. ಓಬಳಪ್ಪ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10-03-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯವನ್ನು ಒಪ್ಪುವುದು".

..........................2

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:30-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 02 (03)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 168, ಪಟ್ಟಾಭಿರಾಮನಗರ ವ್ಯಾಪ್ತಿಯ ಜಯನಗರ 4ನೇ 'ಟಿ ' ಬ್ಲಾಕ್ ಬಡಾವಣೆಯ 28 ನೇ ಮುಖ್ಯ ರಸ್ತೆ ಹಾಗೂ 35 ನೇ ಅಡ್ಡರಸ್ತೆಗಳ ನಡುವೆ ಇರುವ ವಿಶ್ರಾಂತಿ ವನಕ್ಕೆ "ಡಾ॥ ವಿಷ್ಣುವರ್ಧನ ವಿಶ್ರಾಂತಿ ವನ" ಎಂದು ನಾಮಕರಣ ಮಾಡುವ ಪ್ರಸ್ತಾವನೆ ಬಗ್ಗೆ, ದಿನಾಂಕ:29-12-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:171/2010-11 ರಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು : ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:25-1-2011 ರಂದು ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕರಿಸಲಾಗಿರುವುದಿಲ್ಲ.

ಮೇಲಿನ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್:168, ಪಟ್ಟಾಭಿರಾಮನಗರ ವ್ಯಾಪ್ತಿಯ ಜಯನಗರ 4ನೇ 'ಟಿ ' ಬ್ಲಾಕ್ ಬಡಾವಣೆಯ 28ನೇ ಮುಖ್ಯ ರಸ್ತೆ ಹಾಗೂ 35ನೇ ಅಡ್ಡರಸ್ತೆಗಳ ನಡುವೆ ಇರುವ ವಿಶ್ರಾಂತಿ ವನಕ್ಕೆ "ಡಾ॥ ವಿಷ್ಣುವರ್ಧನ ವಿಶ್ರಾಂತಿ ವನ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-05-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:07-05-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:07-05-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:30-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 03 (04)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:94 ರ ವ್ಯಾಪ್ತಿಯಲ್ಲಿ ಬರುವ ಶೇಷಾದ್ರಿಪುರಂ ಸಿರೂರ್ ಪಾರ್ಕ್ ಆಟದ ಮೈದಾನದಲ್ಲಿ ನೂತನವಾಗಿ ನಿರ್ಮಿಸಿರುವ ಒಳಾಂಗಣ ಕ್ರೀಡಾಂಗಣಕ್ಕೆ "ಶ್ರೀ. ಆರ್. ಗುಂಡೂರಾವ್ ಕ್ರೀಡಾ ಸಂಕೀರ್ಣ" ಎಂದು ನಾಮಕರಣ ಮಾಡುವ ಪ್ರಸ್ತಾವನೆಗೆ ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ.4(177)/2010-11 ರಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು/ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:07-02-2011 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲಿನ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ: 94 ರ ವ್ಯಾಪ್ತಿಯಲ್ಲಿ ಬರುವ ಶೇಷಾದ್ರಿಪುರಂ ಸಿರೂರ್ ಪಾರ್ಕ್ ಆಟದ ಮೈದಾನದಲ್ಲಿ ನೂತನವಾಗಿ ನಿರ್ಮಿಸಿರುವ ಒಳಾಂಗಣ ಕ್ರೀಡಾಂಗಣಕ್ಕೆ "ಶ್ರೀ. ಆರ್.ಗುಂಡೂರಾವ್ ಕ್ರೀಡಾ ಸಂಕೀರ್ಣ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:31-03-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:31-03-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:31-03-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:30-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 09 (10)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಜಾಲಹಳ್ಳಿ ಗ್ರಾಮದ ಸ.ನಂ:71/1 ರಲ್ಲಿನ ಹೌಸ್‌ಲಿಸ್ಟ್ ಸಂಖ್ಯೆ:223 ರಲ್ಲಿನ ಜಾಗವು ಶ್ರೀ.ಎ.ಹೆಚ್.ಹನುಮಂತಯ್ಯನವರ ಸ್ವತ್ತಾಗಿದ್ದು, ಇದರಲ್ಲಿನ ಒಂದು ಭಾಗವನ್ನು ರಸ್ತೆ ನಿರ್ಮಾಣ ಮಾಡುವ ಸಲುವಾಗಿ ಅಂದಿನ ಜಾಲಹಳ್ಳಿ ಗ್ರಾಮ ಪಂಚಾಯ್ತಿ ವತಿಯಿಂದ ಸ್ವಾಧೀನಕ್ಕೆ ತೆಗೆದುಕೊಂಡು, ಅವರಿಗೆ ಬದಲಿ ನಿವೇಶನ ನೀಡಲು ಗ್ರಾಮ ಪಂಚಾಯ್ತಿಯು ನಿರ್ಣಯ ತೆಗೆದುಕೊಂಡಿರುತ್ತದೆ. ತದನಂತರದಲ್ಲಿ, ಜಾಲಹಳ್ಳಿ ಗ್ರಾಮ ಪಂಚಾಯ್ತಿಯು ದಾಸರಹಳ್ಳಿ ನಗರಸಭೆಗೆ ಸೇರ್ಪಡೆಯಾಗಿರುತ್ತದೆ. ಗ್ರಾಮ ಪಂಚಾಯ್ತಿಯಿಂದಾಗಲೀ ಅಥವಾ ದಾಸರಹಳ್ಳಿ ನಗರಸಭೆಯಿಂದಾಗಲೀ ಶ್ರೀ. ಎ.ಹೆಚ್.ಹನುಮಂತಯ್ಯನವರಿಗೆ ಬದಲಿ ನಿವೇಶನನೀಡದ ಕಾರಣ, ಸದರಿ ಶ್ರೀ. ಎ.ಹೆಚ್.ಹನುಮಂತಯ್ಯನವರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಮೂಲ ದಾವೆ ಸಂಖ್ಯೆ:3061/1986 ಅನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:25-10-1989 ರಲ್ಲಿ ಅರ್ಜಿದಾರರ ಪರವಾಗಿ ಡಿಕ್ರಿ ಆದೇಶ ನೀಡಿ ಖಾಯಂ ತಡೆಯಾಜ್ಞೆಯನ್ನು ನೀಡಿರುತ್ತದೆ.

ಮೇಲೆ ತಿಳಿಸಿದಂತೆ, ಗ್ರಾಮ ಪಂಚಾಯ್ತಿಯಾಗಲೀ ಅಥವಾ ದಾಸರಹಳ್ಳಿ ನಗರ ಸಭೆಯಾಗಲೀ, ಶ್ರೀ.ಎ.ಹೆಚ್.ಹನುಮಂತಯ್ಯರವರಿಗೆ ಬದಲೀ ನಿವೇಶನ ನೀಡದಿದ್ದ ಕಾರಣ ಶ್ರೀ.ಎ.ಹೆಚ್.ಹನುಮಂತಯ್ಯ ನವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:26061/2004 ಅನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯು ದಿನಾಂಕ:30-06-2004 ರಲ್ಲಿ ಆದೇಶವಾಗಿರುತ್ತದೆ. ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅರ್ಜಿದಾರನ ಮನವಿಯನ್ನು ಪರಿಶೀಲಿಸಿ, 3 ತಿಂಗಳೊಳಗಾಗಿ ಸೂಕ್ತ ರೀತಿಯಲ್ಲಿ ಆದೇಶಿಸುವಂತೆ ಸರ್ಕಾರ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಿರುತ್ತದೆ. ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರು ದಿನಾಂಕ:07-09-1996 ರಲ್ಲಿ ಮಾನ್ಯ ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆಗೆ ಪತ್ರ ಬರೆದು ಜಾಲಹಳ್ಳಿ ಗ್ರಾಮವು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿರುವ ಕಾರಣ, ಈ ವಿಚಾರದಲ್ಲಿ ಸೂಕ್ತ ನಿರ್ಣಯ ತೆಗೆದುಕೊಳ್ಳುವ ಸಲುವಾಗಿ ಮಹಾನಗರ ಪಾಲಿಕೆಗೆ ಕಡತ ಕಳುಹಿಸುವುದರ ಮೂಲಕ ಕೋರಿರುತ್ತಾರೆ.

ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಅರ್ಜಿದಾರನ ಮನವಿಯ ಬಗ್ಗೆ ಯವುದೇ ಕ್ರಮ ತೆಗೆದುಕೊಳ್ಳದೇ ಇದ್ದ ಕಾರಣ, ಶ್ರೀ.ಎ.ಹೆಚ್.ಹನುಮಂತಯ್ಯನವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಿ.ಸಿ.ಸಿ. ಸಂಖ್ಯೆ:194/2005 ಅನ್ನು (ನ್ಯಾಯಾಂಗ ನಿಂದನಾ ಅರ್ಜಿ) ಸಲ್ಲಿಸಿದ್ದು, ಸದರಿ ನ್ಯಾಯಾಲಯ ನಿಂದನಾ ಅರ್ಜಿಯು ದಿನಾಂಕ:22-12-2005ರಲ್ಲಿ ವಿಲೇ ಆಗಿರುತ್ತದೆ. ನಗರಪಾಲಿಕೆಯು ಉಚ್ಚನ್ಯಾಯಾಲಯದ ಆದೇಶವನ್ನು ಸಾಧ್ಯವಾದಷ್ಟು ಬೇಗ ಕಾರ್ಯಗತಗೊಳಿಸಲಾಗುವುದೆಂದು ಮಾನ್ಯ ನ್ಯಾಯಾಲಯದ ಸಮಕ್ಷಮ ಭರವಸೆ ನೀಡಿದ ಕಾರಣ, ಸದರಿ ನಿಂದನಾ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ವಜಾ ಮಾಡಿರುತ್ತದೆ. ಇದಾದ ನಂತರವೂ ಅರ್ಜಿದಾರರಿಗೆ ಪರ್ಯಾಯ ನಿವೇಶನ ನೀಡಿರುವುದಿಲ್ಲ. ಅರ್ಜಿದಾರರು ತಿಳಿಸಿರುವಂತೆ, ಸದರಿ ನಿವೇಶನವು 30x56 ಅಡಿ ಇದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದೇ ಬಡಾವಣೆ ನಕ್ಷೆ ಅಥವಾ ಕ್ರಯಪತ್ರವನ್ನು ಸಲ್ಲಿಸಿರುವುದಿಲ್ಲ ಹಾಗೂ ಸದರಿ ಪ್ರದೇಶವನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ದಿನಾಂಕಕ್ಕೆ, ಅಂದರೆ, ದಿನಾಂಕ:01-10-1995 ರಿಂದ ಆ ಪ್ರದೇಶದ ಎಲ್ಲಾ ಸಾರ್ವಜನಿಕ ಸ್ಥಳಗಳು, ರಸ್ತೆಗಳು ಇತ್ಯಾದಿ ಎಲ್ಲವೂ ಕೆ.ಎಂ.ಸಿ ಕಾಯ್ದೆ-1976 ರ ಕಲಂ-4 ರನ್ವಯ ಪಾಲಿಕೆಯ ವಶದಲ್ಲಿರುತ್ತದೆಂದು ತಿಳಿಸುತ್ತಾ, ಅರ್ಜಿದಾರರಿಗೆ ಪರ್ಯಾಯ ನಿವೇಶನ ಅಥವಾ ಪರಿಹಾರ ಧನವನ್ನು ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಬೆಂಗಳೂರು ಮಹಾನಗರ ಪಾಲಿಕೆಯು ದಿನಾಂಕ:18-06-2005 ರಂದು ಅರ್ಜಿದಾರರಿಗೆ ಹಿಂಬರಹ ನೀಡಿರುತ್ತದೆ. ಅರ್ಜಿದಾರರು ಇದರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:1365/2006 ಅನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯು ದಿನಾಂಕ:21-10-2009 ರಲ್ಲಿ

ಆದೇಶವಾಗಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿದಾರರ ಮನವಿಯನ್ನು ಪುರಸ್ಕರಿಸಿ, ದಿನಾಂಕ:18-06-2005 ರ ಹಿಂಬರಹವನ್ನು ರದ್ದುಪಡಿಸಿರುತ್ತದೆ. ಅಲ್ಲದೆ ಜಾಲಹಳ್ಳಿ ಗ್ರಾಮದ ಸರ್ವೇ ನಂ.1/1 ರಲ್ಲಿ ನಿರ್ಮಾಣವಾಗಿರುವ ನಿವೇಶನದ ಸಂಖ್ಯೆ: ಹೆಚ್‌ಎಲ್ 182/2, ವಿಸ್ತೀರ್ಣ 30x56 ಅಡಿಗಳ ಜಾಗವನ್ನು ಅರ್ಜಿದಾರನಿಗೆ ನೀಡಲು ಸೂಕ್ತ ಆದೇಶ ಹೊರಡಿಸುವಂತೆ ಸರ್ಕಾರ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಿರುತ್ತದೆ. ಒಂದು ವೇಳೆ ಈ ನಿವೇಶನ ಲಭ್ಯವಿಲ್ಲದಿದ್ದಲ್ಲಿ, ಹೆಚ್‌ಎಲ್ 182/2 ರಲ್ಲಿ ಸಮನಾಂತರವಾದ ನಿವೇಶನವನ್ನು 3 ತಿಂಗಳೊಳಗಾಗಿ ಹಂಚಿಕೆ ಮಾಡುವಂತೆಯೂ ಮಾನ್ಯ ಉಚ್ಚ ನ್ಯಾಯಾಲಯವು ನಿರ್ದೇಶಿಸಿರುತ್ತದೆ.

ಈ ಆದೇಶಗಳ ಹಿನ್ನಲೆಯಲ್ಲಿ ಅಂಬಲೀಪುರ ಗ್ರಾಮದ ಸರ್ವೇ ನಂ.24 ರಲ್ಲಿ 1576.25 ಚದರ ಅಡಿ ಅಳತೆಯ ನಿವೇಶನವನ್ನು ಅಳತೆ ಮಾಡಿ ನಕ್ಷೆ ತಯಾರಿಸಿ ವರದಿ ಮಾಡಲು ಸಹಾಯಕ ಕಂದಾಯ ಅಧಿಕಾರಿ (ಬೆಳ್ಳಂದೂರು) ರವರಿಂದ ವರದಿ ಪಡೆಯಲು ಬರೆದಿರುವ ಪತ್ರಕ್ಕೆ ಕಂದಾಯ ಇಲಾಖೆಯಿಂದ ಭೂ-ಬದಲಾವಣೆ ಆದೇಶ ಆಗಬೇಕಾಗಿದ್ದು, ಪ್ರಸ್ತುತ ಜಮೀನು ಸರ್ಕಾರದಿಂದ ಬಿ.ಬಿ.ಎಂ.ಪಿಗೆ ಹಸ್ತಾಂತರವಾಗಬೇಕಿದ್ದು, ಹಸ್ತಾಂತರದ ನಂತರ ಪರ್ಯಾಯ ನಿವೇಶನ ನೀಡುವ ಬಗ್ಗೆ ಪರಿಗಣಿಸಬಹುದಾಗಿದೆ ಎಂದು ವರದಿ ಮಾಡಿರುತ್ತಾರೆ.

ಇದೇ ರೀತಿಯ ಮತ್ತೊಂದು ಪ್ರಕರಣದಲ್ಲಿ ಎಸ್.ಪ್ರಕಾಶ್ ರಿಟ್ ಅರ್ಜಿ ಸಂಖ್ಯೆ:14170/08 ದಾವೆಗೆ ಸಂಬಂಧಿಸಿದಂತೆ, ಅಂಬಲೀಪುರ ಗ್ರಾಮದ ಸರ್ವೆ ನಂ.24 ರಲ್ಲಿ 1 ಎಕರೆ 0.03 ಗುಂಟೆ ಜಮೀನು ಇದ್ದು, ಸದರಿ ಜಮೀನಿನ ಭೂ-ಬದಲಾವಣೆ ಆದೇಶ ಕೋರಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಭೂ-ಬದಲಾವಣೆ ಆದೇಶ ನಿರೀಕ್ಷಿಸಿ, ಎಸ್.ಪ್ರಕಾಶ್ ರವರಿಗೆ 10.890 ಚದರ ಅಡಿಗಳಷ್ಟು ಜಾಗವನ್ನು ಗುತ್ತಿಗೆ ನೀಡಲು ಪಾಲಿಕೆಯ ನಿರ್ಣಯ ತೆಗೆದುಕೊಂಡಿದ್ದು, ಸದರಿ ನಿರ್ಣಯವನ್ನು ಸರ್ಕಾರದ ಅನುಮೋದನೆಗಾಗಿ ಕಳುಹಿಸಿದೆ. ಉಳಿದಿರುವ ಜಾಗದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ, 1576.25 ಚದರ ಅಡಿ ಜಾಗವನ್ನು ಪ್ರಸ್ತುತ ಅರ್ಜಿದಾರರಿಗೆ ನೀಡಬಹುದಾಗಿದೆ.

ಆದ್ದರಿಂದ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ, ಅಂಬಲೀಪುರ ಗ್ರಾಮದ ಸ.ನಂ.24 ರಲ್ಲಿ 1576.25 ಚದರ ಅಡಿಗಳ ಜಾಗವನ್ನು ಪರ್ಯಾಯ ನಿವೇಶನವನ್ನಾಗಿ ಶ್ರೀ.ಎ.ಹೆಚ್.ಹನುಮಂತಯ್ಯನವರಿಗೆ ನೀಡುವ ಕುರಿತು ಸೂಕ್ತ ತೀರ್ಮಾನಕ್ಕಾಗಿ ದಿನಾಂಕ:26-11-2009 ರ ಆಯುಕ್ತರವರ ಟಿಪ್ಪಣಿಯನ್ನು ಹಿಂದಿನ ಆಡಳಿತಗಾರರು ಅನುಮೋದಿಸಿರುವುದರಿಂದ, ಮಾನ್ಯ ಆಡಳಿತಗಾರರ ಸದರಿ ನಡವಳಿಯನ್ನು ಲಗತ್ತಿಸಿ, ಸರ್ಕಾರದ ಅನುಮೋದನೆ ಪಡೆದು ಕಳುಹಿಸಿಕೊಡಲು ದಿನಾಂಕ:16-12-2009 ರಲ್ಲಿ ಸರ್ಕಾರವನ್ನು ಕೋರಲಾಗಿರುತ್ತದೆ. ಇದರಂತೆ, ಸರ್ಕಾರವು ಆದೇಶದ ಸಂಖ್ಯೆ:ನಅಇ/09/ಎಂಎನ್‌ಜಿ/2010, ದಿನಾಂಕ: 04-03-2011 ರಂತೆ ಹಿಂದಿನ ಮಾನ್ಯ ಆಡಳಿತಗಾರರ ಟಿಪ್ಪಣಿಯನ್ನು ಒಪ್ಪಿ ಸರ್ಕಾರವು ಅನುಮೋದನೆ ನೀಡಿರುತ್ತದೆ. ಆದುದರಿಂದ, ಸದರಿ ಸರ್ಕಾರದ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ದಾಖಲಾತಿ ಮಾಡಿಕೊಳ್ಳುವ ಸಲುವಾಗಿ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-04-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:16-04-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:16-04-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:30-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 10 (11)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್-58 ರ ವ್ಯಾಪ್ತಿಯ ಜಯನಗರ, ಮಾರೇನಹಳ್ಳಿ, ಟ್ಯಾಂಕ್‌ಬೆಡ್ ಏರಿಯಾ, 9ನೇ ಬ್ಲಾಕ್, ನಿವೇಶನ ಸಂಖ್ಯೆ: 127 ರ 16x25 ಅಡಿಗಳ ಜಾಗವನ್ನು ದಿನಾಂಕ:31-03-1978 ರಲ್ಲಿ ನಗರಪಾಲಿಕೆಯು ಶ್ರೀಮತಿ. ವರತಮ್ಮ ಎಂಬುವವರಿಗೆ ಕ್ರಯಕ್ಕೆ ನೀಡಿರುತ್ತದೆ. ಶ್ರೀಮತಿ. ವರತಮ್ಮನವರು ದಿನಾಂಕ:25-05-1979 ರಂದು ಶ್ರೀ. ಕೆ.ಕೆ. ಆಲಿ ರವರಿಗೆ, ನಂತರ ಶ್ರೀ. ಕೆ.ಕೆ. ಆಲಿ ಯವರು ದಿನಾಂಕ:18-10-1979 ರಂದು ಸೆಲ್ವಂ ರವರಿಗೆ ಮಾರಾಟ ಮಾಡಿದ್ದು, ಶ್ರೀ. ಸೆಲ್ವಂ ರವರು ಕ್ರಯಕ್ಕೆ ಪಡೆದ ಇದೇ ಸ್ವತ್ತನ್ನು ಶ್ರೀ. ಪಿ.ಕೆ.ರಾಮಚಂದ್ರ ಮತ್ತು ಶ್ರೀಮತಿ. ವಿದ್ಯಾ ಸೆಹಗಲ್ ರವರುಗಳಿಗೆ ಅನುಕ್ರಮವಾಗಿ ದಿನಾಂಕ:29-10-1982 ಹಾಗೂ ದಿನಾಂಕ:10-05-2001 ರಂದು ಮಾರಾಟ ಮಾಡಿರುತ್ತಾರೆ. ನಂತರ ಸೆಲ್ವಂರವರು ಶ್ರೀಮತಿ. ವಿದ್ಯಾ ಸೆಹಗಲ್ ರವರಿಗೆ ನಿವೇಶನ ಚಕ್ಕುಬಂದಿ ಬದಲಾವಣೆ ಮಾಡಿ ತಿದ್ದುಪಡಿ ಕ್ರಯಪತ್ರ ಮಾಡಿಕೊಟ್ಟಿದ್ದು, ತಿದ್ದುಪಡಿ ಕ್ರಯಪತ್ರದಲ್ಲಿ ನಗರ ಪಾಲಿಕೆಯ ಸ್ವತ್ತನ್ನು ಗುರುತಿಸಲಾಗಿರುತ್ತದೆ.

ಅನಧಿಕೃತವಾಗಿ ನಗರ ಪಾಲಿಕೆ ಸ್ವತ್ತನ್ನು ಮಾರಾಟ ಮಾಡಲಾಗಿರುವ ಹಿನ್ನಲೆಯಲ್ಲಿ, ಶ್ರೀ. ಸೆಲ್ವಂ ರವರ ವಿರುದ್ಧ ಜಯನಗರ ಪೊಲೀಸ್ ಠಾಣೆಯಲ್ಲಿ ದಿನಾಂಕ:20-06-2005 ರಂದು ದೂರು ದಾಖಲಿಸಲಾಗಿದ್ದು, ಸದರಿ ಪ್ರಕರಣದಲ್ಲಿ ತನಿಖಾಧಿಕಾರಿಯವರು ಆರೋಪಿಯನ್ನು ಪತ್ತೆ ಮಾಡುವುದಕ್ಕಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿ, ಆರೋಪಿಯು ಸಕಾಲಕ್ಕೆ ಪತ್ತೆಯಾಗದ ಕಾರಣ, ಆರೋಪಿ ಪತ್ತೆಯಾಗಿಲ್ಲವೆಂದು ಮಾನ್ಯ ನ್ಯಾಯಾಲಯಕ್ಕೆ ದಿನಾಂಕ:23-01-2008 ರಂದು 'ಸಿ' ಅಂತಿಮ ವರದಿಯನ್ನು ಸಲ್ಲಿಸಲಾಗಿರುತ್ತದೆಂದು ಜಯನಗರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ತಿಳಿಸಿರುತ್ತಾರೆ.

ಶ್ರೀಮತಿ ವಿದ್ಯಾ ಸೆಹಗಲ್ ರವರು ಕ್ರಯಕ್ಕೆ ಪಡೆದ ಸ್ವತ್ತಿನಲ್ಲಿ ಪಾಲಿಕೆಯಿಂದ ದಿನಾಂಕ:08-08-2001 ರಲ್ಲಿ ನಕ್ಷೆ ಮಂಜೂರಾತಿ ಪಡೆದು ಕಟ್ಟಡ ನಿರ್ಮಾಣ ಮಾಡಿಕೊಂಡು ವಾಸ ಮಾಡುತ್ತಿರುವ ಕಾರಣ, ಈ ಸ್ವತ್ತನ್ನು ಶ್ರೀಮತಿ. ವಿದ್ಯಾ ಸೆಹಗಲ್ ರವರಿಗೆ ಅಂದಿನ ಮಾರುಕಟ್ಟೆ ದರಕ್ಕೆ ಅಂದರೆ, ರೂ.2,60,000/- ಗಳಿಗೆ ವಿಲೇವಾರಿ ಮಾಡಲು ದಿನಾಂಕ:26-10-2005 ರಂದು ನಡೆದ ಪಾಲಿಕೆ ಸಭೆಯಲ್ಲಿ ವಿಷಯ ಸಂಖ್ಯೆ:14(99) ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಸರ್ಕಾರದ ದಿನಾಂಕ:17-04-2007 ರ ಮಾರ್ಗಸೂಚಿಯಂತೆ, ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ಚದರ ಅಡಿ ಒಂದಕ್ಕೆ ವಸತಿಗೆ ರೂ.2,000/- ಗಳಾಗಿದ್ದು, 400 ಚದರ ಅಡಿಗೆ ಸ್ವತ್ತಿನ ಮೌಲ್ಯವು ರೂ.8,00,000/- ಗಳಾಗುತ್ತದೆ. ಸದರಿ ನಿವೇಶನವು ಮೂಲೆ ನಿವೇಶನವಾಗಿರುವ ಪ್ರಯುಕ್ತ ಮತ್ತು ಸರ್ಕಾರದ ಸುತ್ತೋಲೆಯನ್ವಯ ಶೇ.30% ರಷ್ಟು ಹೆಚ್ಚುವರಿ ದರದನ್ವಯ ಆ ಸ್ವತ್ತಿನ ಒಟ್ಟಾರೆ ಮೌಲ್ಯವು ರೂ.10,40,000/- ಗಳಾಗುತ್ತದೆಂದು ತಿಳಿಸುತ್ತಾ, ಪಾಲಿಕೆ ಸಭೆಯ ನಿರ್ಣಯದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:58, ಜಯನಗರ, ಮಾರೇನಹಳ್ಳಿ, ಟ್ಯಾಂಕ್‌ಬೆಡ್ ಏರಿಯಾ, 9ನೇ ಬ್ಲಾಕ್‌ನಲ್ಲಿರುವ 16x25=400 ಚದರ ಅಡಿ ಅಳತೆಯ ನಿವೇಶನ ಸಂಖ್ಯೆ:127 ಅನ್ನು ಶ್ರೀಮತಿ. ವಿದ್ಯಾ ಸೆಹಗಲ್ ರವರಿಗೆ ಪ್ರಸಕ್ತ ಮಾರುಕಟ್ಟೆ ದರಕ್ಕೆ ಅಂದರೆ, ರೂ.10,40,000/- ಗಳಿಗೆ ಕ್ರಯಕ್ಕೆ ನೀಡಲು ಅನುಮೋದಿಸುವಂತೆ ಸರ್ಕಾರವನ್ನು ಕೋರಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

..........................2

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.58, ಜಯನಗರ, ಮಾರೇನಹಳ್ಳಿ, ಟ್ಯಾಂಕ್‌ಬೆಡ್ ಏರಿಯಾ, 9ನೇ ಬ್ಲಾಕ್, ನಿವೇಶನ ಸಂಖ್ಯೆ:127 ರ 16x25 ಅಡಿ, ಅಂದರೆ 400 ಚದರ ಅಡಿ ವಿಸ್ತೀರ್ಣದ ನಿವೇಶನದ ಸಂಖ್ಯೆ:127 ಅನ್ನು ರೂ.10,40,000/- (ಹತ್ತು ಲಕ್ಷದ ನಲವತ್ತು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ ಶ್ರೀಮತಿ. ವಿದ್ಯಾ ಸೆಹಗಲ್ ರವರಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಕ್ರಯಕ್ಕೆ ನೀಡಲು ಸರ್ಕಾರವು ಅನುಮೋದನೆ ನೀಡಿದೆ.

1. ಶ್ರೀ. ಸೆಲ್ವಂ ಇವರಿಂದ ಮಾಡಲ್ಪಟ್ಟ ಕ್ರಯಪತ್ರವನ್ನು ರದ್ದುಗೊಳಿಸತಕ್ಕದ್ದು.

2. ಕ್ರಯಪತ್ರವನ್ನು (Title Deed) ನೀಡುವ ಮುನ್ನ ಶ್ರೀಮತಿ. ವಿದ್ಯಾ ಸೆಹಗಲ್ (ಕ್ರಯಪತ್ರಕ್ಕೆ ಅರ್ಜಿದಾರರು) ಇವರಿಂದ ಸದರಿ ಮೊತ್ತವನ್ನು ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/808/ವೆಚ್ಚ9/2010, ದಿನಾಂಕ:01-01-2011 ರ ಸಹಮತಿಯೊಂದಿಗೆ ಸರ್ಕಾರವು ಆದೇಶ ಸಂಖ್ಯೆ:ನಅಇ/319/ಎಂಎನ್‌ಜಿ/2005, ಬೆಂಗಳೂರು, ದಿನಾಂಕ:03-05-2011 ರಲ್ಲಿ ಮಂಜೂರಾತಿ ನೀಡಿ ಆದೇಶಿಸಿದೆ.

ಮೇಲ್ಕಂಡ ಅಂಶಗಳಲ್ಲಿ, ಸರ್ಕಾರದ ದಿನಾಕ:03-05-21011 ರ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ದಾಖಲಾತಿ ಮಾಡಿಕೊಳ್ಳುವ ಸಲುವಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:14-05-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:14-05-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ಆಯುಕ್ತರವರ ದಿನಾಂಕ:14-05-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:30-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 15 (16)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರಿನ ತ್ಯಾಗರಾಜನಗರದ, 3ನೇ ಬ್ಲಾಕ್‌ನಲ್ಲಿನ 7ನೇ 'ಎ' ಮುಖ್ಯರಸ್ತೆಯಲ್ಲಿರುವ ನಿವೇಶನ ಸಂಖ್ಯೆ.258 ರ (30x50) ಚದರ ಅಡಿ ನಿವೇಶನವು ಶ್ರೀ.ಎನ್.ಆರ್.ಸುಬ್ರಹ್ಮಣ್ಯಂ ಇವರ ಸ್ವತ್ತಾಗಿದ್ದು, ಈ ಜಾಗವನ್ನು ರಸ್ತೆ ವಿಸ್ತರಿಸಲು ಅನಧಿಕೃತವಾಗಿ ನಗರಪಾಲಿಕೆಯವರು ಉಪಯೋಗಿಸಿಕೊಂಡಿರುತ್ತಾರೆಂದೂ, ಇದಕ್ಕೆ ಪರ್ಯಾಯವಾಗಿ ಜಯನಗರ 4ನೇ ಬ್ಲಾಕ್‌ನ 30-31 ನೇ ಅಡ್ಡರಸ್ತೆಯಲ್ಲಿರುವ ನಗರ ಪಾಲಿಕೆಯ 30x40 ಚದರ ಅಡಿ ವಿಸ್ತೀರ್ಣದ ನಿವೇಶನವನ್ನು ಸದರಿ ಖಾತೆದಾರರಿಗೆ ಮಂಜೂರು ಮಾಡಲು ಮಾನ್ಯ ಆಡಳಿತಗಾರರು, ದಿನಾಂಕ:03-08-1978 ರಂದು ತೀರ್ಮಾನ ಕೈಗೊಂಡಿರುತ್ತಾರೆ.

ಆದರೆ, ಸ್ವತ್ತಿನ ಖಾತೆದಾರರು ಮನವಿ ಸಲ್ಲಿಸಿ, 40x60 ಚದರ ಅಡಿ ವಿಸ್ತೀರ್ಣದ ಬದಲಿ ನಿವೇಶನ ಮಂಜೂರು ಮಾಡಬೇಕೆಂದು ಕೋರಿದ ಮೇರೆಗೆ, ಜಯನಗರ ಬಡಾವಣೆಯ 4ನೇ ಬ್ಲಾಕ್‌ನ 30-31ನೇ ಅಡ್ಡರಸ್ತೆಯ 73ನೇ ಸಂಖ್ಯೆಯ 53x40 ಚದರ ಅಡಿಗಳ ನಿವೇಶನವನ್ನು ಮಂಜೂರು ಮಾಡಬಹುದೆಂದು, ದಿನಾಂಕ:23-11-1991 ರಂದು ನಡೆದ ಪಾಲಿಕೆಯ ಸಭೆಯಲ್ಲಿ ವಿಷಯದ ಸಂಖ್ಯೆ.18(212) ರಲ್ಲಿ ತೀರ್ಮಾನಿಸಲಾಗಿರುತ್ತದೆ. ಪಾಲಿಕೆಯ ಈ ತೀರ್ಮಾನಕ್ಕೆ ಸರ್ಕಾರವು ತನ್ನ ಆದೇಶದ ಸಂಖ್ಯೆ.ವನಇ:44:ಎಂಎನ್‌ಜಿ-92, ದಿನಾಂಕ:07-10-1998 ರಲ್ಲಿ ಕೆಳಕಂಡಂತೆ ಆದೇಶ ಹೊರಡಿಸಿರುತ್ತಾರೆ.

> "ತ್ಯಾಗರಾಜನಗರ 3ನೇ ಬ್ಲಾಕ್, 7ನೇ 'ಎ' ಮುಖ್ಯರಸ್ತೆಯ 258ನೇ ನಿವೇಶನವನ್ನು ಭೂಸ್ವಾಧೀನಪಡಿಸಿಕೊಂಡಿರುವ ಪ್ರಯುಕ್ತ, ಸ್ವತ್ತಿನ ಮಾಲೀಕರಾದ ಶ್ರೀ.ಎನ್.ಆರ್.ಸುಬ್ರಹ್ಮಣ್ಯಂ ರವರಿಗೆ 4ನೇ 'ಟಿ' ಬ್ಲಾಕ್ ಜಯನಗರ 30 ಮತ್ತು 31ನೇ ಅಡ್ಡರಸ್ತೆಯಲ್ಲಿರುವ 53 x 40 ಅಡಿ ವಿಸ್ತೀರ್ಣದ ನಿವೇಶನ ಸಂಖ್ಯೆ.73 ಅನ್ನು ಬದಲಿ ನಿವೇಶನವನ್ನಾಗಿ ನೀಡಲು, ಈ ಬದಲೀ ನಿವೇಶನಕ್ಕೆ ರೂ.3,91,680/- ಗಳನ್ನು ಮಹಾನಗರ ಪಾಲಿಕೆಗೆ ಪಾವತಿಸಿಕೊಳ್ಳತಕ್ಕದ್ದು, ಎಂಬ ಷರತ್ತು ವಿಧಿಸಿ ಮಂಜೂರು ಮಾಡಲು ಸರ್ಕಾರವು ಅನುಮೋದನೆ ನೀಡಿದೆ."

ಸರ್ಕಾರದ ಈ ಆದೇಶವನ್ನು ಅನುಸರಿಸಿ, ಶ್ರೀ.ಎನ್.ಆರ್.ಸುಬ್ರಹ್ಮಣ್ಯಂ ರವರಿಗೆ ರೂ.3,91,680/- ಗಳನ್ನು ಪಾಲಿಕೆಗೆ ಜಮಾ ಮಾಡಲು ತಿಳುವಳಿಕೆ ಪತ್ರವನ್ನು ದಿನಾಂಕ:07-11-1998 ರಂದು ನೀಡಲಾಗಿತ್ತು. ಆದರೆ, ಸದರಿಯವರು ದಿನಾಂಕ:16-11-1998 ರಂದು ಮನವಿ ಸಲ್ಲಿಸಿ, ಬದಲಿ ನಿವೇಶನದ ಸ್ವತ್ತಿನ ಸ್ವಾಧೀನ ವಹಿಸಿಕೊಡಲು ಮತ್ತು ಪರಿಹಾರ ಧನವನ್ನು ಸಹ ನೀಡಲು ಕೋರಿರುತ್ತಾರೆ. ತದನಂತರ, ದಿನಾಂಕ: 26/30-11-2001 ರಂದು ಮನವಿ ಸಲ್ಲಿಸಿ ನಮಗೆ ನ್ಯಾಯಯುತವಾದ ಪರಿಹಾರವನ್ನು ದೊರಕಿಸಿಕೊಟ್ಟು ಉಪಕರಿಸಬೇಕೆಂದು ಕೋರಿರುತ್ತಾರೆ.

ಅರ್ಜಿದಾರರ ಕೋರಿಕೆಯ ಬಗ್ಗೆ ಹಣದ ರೂಪದಲ್ಲಿ ರೂ.9,24,000/- ಗಳ ಪರಿಹಾರ ನೀಡಲು ಮತ್ತು ಸರ್ಕಾರಿ ಆದೇಶವನ್ನು ಮಾರ್ಪಾಡು ಮಾಡಿಕೊಡಲು ಪ್ರಸ್ತಾವನೆಯನ್ನು ದಿನಾಂಕ: 25-01-2003 ರಂದು ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಲಾಗಿತ್ತು. ಆದರೆ, ಈ ಬಗ್ಗೆ ಸರ್ಕಾರದಿಂದ ಯಾವುದೇ ಆದೇಶ ಬಂದಿರುವುದಿಲ್ಲ. ಆನಂತರ, ಸದರಿ ಪ್ರಕರಣದ ಬಗ್ಗೆ ಮುಂದಿನ ಕ್ರಮ ಜರುಗಿಸಿರುವುದಿಲ್ಲ. ನಂತರ ಅರ್ಜಿದಾರರ ಮನವಿಯ ಮೇರೆಗೆ ದಿನಾಂಕ:20-01-2010 ರಂದು ಸರ್ಕಾರದಿಂದ ಪತ್ರ ಬಂದಿದ್ದು, ದಿನಾಂಕ:01-09-2010 ರಂದು ಪಾಲಿಕೆಯಿಂದ ಸರ್ಕಾರಕ್ಕೆ ಪತ್ರ ಬರೆದು, ಸದರಿ ನಿವೇಶನವನ್ನು

............................2

ಈ ಮೊದಲು ನಿಗಧಿಪಡಿಸಲಾಗಿದ್ದ ದರವನ್ನು ಅಂದರೆ, ರೂ.9,24,000/- ಗಳನ್ನು ಪಾವತಿಸಿ ನೇರವಾಗಿ ಖರೀದಿಸಲು ಅನುಮೋದನೆ ಕೋರಲಾಗಿದೆ. ಆದರೆ, ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯವಿರುವ ಸ್ವತ್ತುಗಳನ್ನು ಪಾಲಿಕೆಯ 1894 ರ ಭೂಸ್ವಾಧೀನ ಕಾಯ್ದೆಯಡಿಯಲ್ಲಿ, ಸ್ವಾಧೀನಪಡಿಸಿಕೊಳ್ಳಬಹುದೇ ಹೊರತು ನೇರವಾಗಿ ಖರೀದಿಸಲು ಕೆಎಂಸಿ ಕಾಯ್ದೆ 1976 ಕಲಂ 175 ಮತ್ತು 177 ರನ್ವಯ ಅವಕಾಶವಿರುವುದಿಲ್ಲ. ಆದ್ದರಿಂದ, ದಿನಾಂಕ:01-09-2010 ರಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಹಿಂಪಡೆದು 1894ರ ಭೂಸ್ವಾಧೀನ ಕಾಯ್ದೆಯ ಪ್ರಕಾರ ಭೂಸ್ವಾಧೀನಪಡಿಸಿಕೊಳ್ಳುವುದು ಸಮಂಜಸವಾಗಿದೆ ಎಂದು ಪರಿಗಣಿಸಲಾಗಿದೆ.

ಅಲ್ಲದೆ, ಈ ಪ್ರಕರಣವು ಸುಮಾರು 32 ವರ್ಷಗಳ ಹಿಂದಿನ ಪ್ರಕರಣವಾಗಿದ್ದು, ಈಗಾಗಲೇ ಖಾತೆದಾರರ ಸ್ವತ್ತನ್ನು ಸಾರ್ವಜನಿಕ ಉದ್ದೇಶಕ್ಕಾಗಿ ರಸ್ತೆ ನಿರ್ಮಿಸಲು ಉಪಯೋಗಿಸಿಕೊಳ್ಳಲಾಗಿದ್ದು, ದೀರ್ಘ ಕಾಲದ ಈ ಪ್ರಕರಣವನ್ನು ಅಂತ್ಯಗೊಳಿಸಲು ಹಾಗೂ ಖಾತೆದಾರರಿಂದ ಭೂಸ್ವಾಧೀನಪಡಿಸಿಕೊಂಡಿರುವ ಸ್ವತ್ತಿಗೆ ನ್ಯಾಯಯುತ ಪರಿಹಾರ ನೀಡಲು, ಈ ಸ್ವತ್ತನ್ನು ಚಾಲ್ತಿಯಲ್ಲಿರುವ ಸರ್ಕಾರದ ಮಾರುಕಟ್ಟೆ ಬೆಲೆಯ ಮಾರ್ಗಸೂಚಿ ದರದಂತೆ 1894ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯಕವೂ ಹಾಗೂ ಸೂಕ್ತವೂ ಆಗಿರುತ್ತದೆ.

ಆದುದರಿಂದ, ಕಾರ್ಯದರ್ಶಿಗಳು, ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು, ಇವರು ದಿನಾಂಕ:17-04-2007 ರಂದು ಪ್ರಕಟಿಸಿರುವ ಸ್ಥಿರಾಸ್ತಿಗಳ ಮಾರುಕಟ್ಟೆ ದರದಂತೆ ತ್ಯಾಗರಾಜನಗರದ ಆಸ್ತಿಗಳ ದರ ಚ.ಅ. 1ಕ್ಕೆ ರೂ.1,300/- ಇದ್ದು, ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಸದರಿ ಭೂ ಪರಿಹಾರಕ್ಕೆ ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

**'ಅ'**

| | | | |
|---|---|---|---|
| 1. ಚ.ಅ. 1 ಕ್ಕೆ ರೂ.1300/-ರಂತೆ 1500 ಚ.ಅ.ಗಳಿಗೆ | - | ರೂ. | 19,50,000-00 |
| 2. ಶೇ.12 ರಷ್ಟು ಹೆಚ್ಚುವರಿ ಮಾರುಕಟ್ಟೆ ಬೆಲೆ (1 ವರ್ಷಕ್ಕೆ) | - | ರೂ. | 2,34,000-00 |
| 3. ಶೇ.30 ರಷ್ಟು ಶಾಸನಬದ್ಧ ಭತ್ಯೆ | - | ರೂ. | 5,85,000-00 |
| ಒಟ್ಟು | - | **ರೂ.** | **27,69,000-00** |

**ಆ**

| | | | |
|---|---|---|---|
| 1. ಶೇ.10 ರ ಆಡಳಿತ ವೆಚ್ಚ | - | ರೂ. | 2,76,900-00 |
| 2. ಶೇ.1 ರಷ್ಟು ಆಡಿಟ್ ವೆಚ್ಚ | - | ರೂ. | 27,690-00 |
| 3. ಪ್ರಕಟಣಾ ವೆಚ್ಚ | - | ರೂ. | 1,50,000-00 |
| ಒಟ್ಟು | - | ರೂ. | 4,54,590-00 |

(ಅ+ಅ) ಒಟ್ಟು - ರೂ. 32,23,590-00
(ಮೂವತ್ತೆರಡು ಲಕ್ಷದ ಇಪ್ಪತ್ಮೂರು ಸಾವಿರದ ಐದುನೂರ ತೊಂಭತ್ತು ರೂ.ಗಳು ಮಾತ್ರ)

ಮೇಲೆ ತಿಳಿಸಿರುವ ನಿವೇಶನವನ್ನು ಭೂಸ್ವಾಧೀನ ಕಾಯ್ದೆ, 1894 ರನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ಆಗುವ ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. 32,23,590-00 (ಮೂವತ್ತೆರಡು ಲಕ್ಷದ ಇಪ್ಪತ್ಮೂರು ಸಾವಿರದ ಐದುನೂರ ತೊಂಭತ್ತು ರೂ.ಗಳು ಮಾತ್ರ) ಗಳಾಗಲಿದ್ದು, ಈ ಮೊತ್ತವನ್ನು ಪಾಲಿಕೆಯ 2010-11ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಹಣದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14-10-2010 ರ ಟಿಪ್ಪಣಿ ಹಾಗೂ ಸದರಿ

.........................3

ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15–11–2010 ರ ನಿರ್ಣಯ ಹಾಗೂ ದಿನಾಂಕ:14–10–2010 ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:15–03–2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15–11–2010 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:15–03–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15–11–2010 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:15–03–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:30-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 16 (17)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.187 ರ ಸಾರಕ್ಕಿ ಕೆರೆ ಪ್ರದೇಶದಲ್ಲಿ 2007 ರಲ್ಲಿ ಬಿದ್ದ ಭಾರಿ ಮಳೆಯಿಂದ ಹಲವಾರು ಮನೆಗಳು ಜಲಾವೃತಗೊಂಡು ಜನಜೀವನ ಅಸ್ತವ್ಯಸ್ತಗೊಂಡ ಹಿನ್ನಲೆಯಲ್ಲಿ, ಮಳೆ ನೀರು ಸುಗಮವಾಗಿ ರಾಜಕಾಲುವೆ ಮೂಲಕ ಸಾಗುವ ಸಂಬಂಧ ಸಾರಕ್ಕಿ ಕೆರೆಯಿಂದ ಪುಟ್ಟೇನಹಳ್ಳಿ, ಬಿಳೇಕಹಳ್ಳಿ, ಮಡಿವಾಳ ಕೆರೆ ಮಾರ್ಗವಾಗಿ ಕಣಿವೆ ಕೆ.209 ರ ಬೃಹತ್ ಮಳೆ ನೀರುಗಾಲುವೆಯನ್ನು ಕೋರಮಂಗಲ ರವರೆಗೆ ಪುನರುಜ್ಜೀವನಗೊಳಿಸುವ ಕಾಮಗಾರಿಗಾಗಿ ಸಾರಕ್ಕಿ ಕೆರೆ ಗ್ರಾಮದ ಈ ಕೆಳಗೆ ಕಾಣಿಸಿರುವ ಸರ್ವೆ ನಂಬರ್ ಸ್ವತ್ತು/ಆಸ್ತಿಗಳನ್ನು ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಅರಕೆರೆ ಉಪವಿಭಾಗ ರವರು ಹಾಗೂ ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆ ನೀರುಗಾಲುವೆ, ಬೊಮ್ಮನಹಳ್ಳಿ ವಲಯ ರವರುಗಳು ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ ಇವರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಈ ಕಾಮಗಾರಿ/ಯೋಜನೆಗೆ 23 ಸ್ವತ್ತುಗಳು ಒಳಪಡುವುದಾಗಿ ತಿಳಿಸಲಾಗಿದ್ದು, ಈ ಪೈಕಿ ಮಹಮ್ಮದ್ ರಫೀಕ್‌ರವರಿಗೆ ನ್ಯಾಯಾಲಯದ ಆದೇಶದಂತೆ ಈಗಾಗಲೇ ಶೇ.80 ರಷ್ಟು ಭೂಪರಿಹಾರವನ್ನು ವಿತರಿಸಲಾಗಿದ್ದು, ಉಳಿದ ಶೇ.20 ರಷ್ಟು ಭೂಪರಿಹಾರವನ್ನು ವಿತರಿಸಲು ಕ್ರಮವಹಿಸಲಾಗಿದೆ ಹಾಗೂ ಶ್ರೀ. ವೆಂಕಟೇಶ್ ರೆಡ್ಡಿ ಮತ್ತು ಶ್ರೀ. ನಾರಾಯಣಸ್ವಾಮಿಯವರಿಗೆ ಟಿ.ಡಿ.ಆರ್. ನೀಡುವುದರ ಬಗ್ಗೆ ಪ್ರತ್ಯೇಕವಾಗಿ ಕ್ರಮ ವಹಿಸಲಾಗುತ್ತಿದೆ. ಇನ್ನು ಉಳಿದ ಶ್ರೀ. ಕೃಷ್ಣಪ್ಪ, ಶ್ರೀ. ಶ್ರೀನಿವಾಸ್, ಶ್ರೀ. ಅರುಣಕುಮಾರ್ ರವರುಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ, ಇವರ ಸ್ವತ್ತುಗಳ ಭೂಸ್ವಾಧೀನ ಪ್ರಸ್ತಾವನೆಯನ್ನು ಸದ್ಯಕ್ಕೆ ತೆಗೆದುಕೊಂಡಿಲ್ಲವೆಂದು ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆ ನೀರುಗಾಲುವೆ, ಬೊಮ್ಮನಹಳ್ಳಿ ವಲಯ ರವರು ವರದಿ ನೀಡಿರುತ್ತಾರೆ.

ಈ ಪ್ರಕರಣದ ಆಸ್ತಿಗಳ ಸ್ಥಳ ತನಿಖೆಯನ್ನು ಉಪ ಆಯುಕ್ತರು (ಭೂಸ್ವಾಧೀನ) ರವರು ವಿಶೇಷ ಭೂಸ್ವಾಧೀನಾಧಿಕಾರಿರವರೊಂದಿಗೆ ದಿನಾಂಕ:08-09-2010 ರಂದು ನಡೆಸಿರುತ್ತಾರೆ. ಆ ಸಮಯದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಅರಕೆರೆ ಉಪವಿಭಾಗ, ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆ ನೀರುಗಾಲುವೆ ಬೊಮ್ಮನಹಳ್ಳಿ ವಲಯ, ವಾರ್ಡ್‌ನ ಪಾಲಿಕೆಯ ಸದಸ್ಯರು ಹಾಗೂ ವಲಯದ ಮೋಜಣಿದಾರರು ಹಾಜರಿರುತ್ತಾರೆ ಹಾಗೂ ಸ್ಥಳ ತನಿಖೆಯಿಂದ ಈ ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಅವಶ್ಯಕತೆ ಇದೆಯೆಂದು ವರದಿ ಮಾಡಲಾಗಿದೆ.

ಸಾರಕ್ಕಿ ಕೆರೆ ಹಾಗೂ ಪುಟ್ಟೇನಹಳ್ಳಿ ಪ್ರದೇಶದಲ್ಲಿ ಮಳೆ ನೀರಿನಿಂದ ಅಲ್ಲಿನ ಜನಜೀವನ ಅಸ್ತವ್ಯಸ್ತಗೊಂಡ ಪ್ರಯುಕ್ತ ಮಳೆ ನೀರು ಸುಗಮವಾಗಿ ಹರಿದು ಹೋಗಲು ಹಾಲಿ ಇರುವ ರಾಜಕಾಲುವೆಯನ್ನು ಅಗಲ ಮಾಡಲು ಹಾಗೂ ಪುನರ್ ನಿರ್ಮಾಣ ಮಾಡುವ ಕಾಮಗಾರಿಗಾಗಿ ಸ್ವತ್ತು/ಆಸ್ತಿಗಳನ್ನು ಭೂಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆಂದು ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಸಹ ಶಿಫಾರಸ್ಸು ಮಾಡಿರುತ್ತಾರೆ.

..........................2

## ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತುಗಳ ವಿವರಗಳು ಈ ಕೆಳಕಂಡಂತೆ ಇರುತ್ತವೆ

| ಕ್ರ. ಸಂ. | ಭೂಸ್ವಾಧೀನಕ್ಕೆ ಒಳಪಟ್ಟ ಆಸ್ತಿಯ/ಸ್ವತ್ತಿನ ಮಾಲೀಕರ/ಅನುಭವದಾರರ ಹೆಸರು | ಗ್ರಾಮದ ಹೆಸರು | ಸರ್ವೆ ನಂ. | ಆಸ್ತಿ ಸಂಖ್ಯೆ | ಖಾತಾ ಸಂಖ್ಯೆ | ಸ್ವತ್ತಿನ ತರಹ (ನಿವೇಶನ+ಕಟ್ಟಡ ಇತ್ಯಾದಿ) | ಭೂಸ್ವಾಧೀನತೆಗೆ ಒಳಪಟ್ಟಿರುವ ವಿಸ್ತೀರ್ಣ | | ನಿವೇಶನ ಮೌಲ್ಯ | ಕಟ್ಟಡ ಮೌಲ್ಯ | ಒಟ್ಟು |
|---|---|---|---|---|---|---|---|---|---|---|---|
| | | | | | | | ಚ.ಅಡಿಗಳಲ್ಲಿ | ಚ.ಮೀ.ಗಳಲ್ಲಿ | | | |
| 1 | ಶ್ರೀ. ವಿ.ಶ್ರೀನಿವಾಸ್ ರೆಡ್ಡಿ ಬಿನ್ ಎಸ್.ಎ.ವೆಂಕಟಸ್ವಾಮಿ ರೆಡ್ಡಿ | ಸಾರಕ್ಕಿ ಕೆರೆ | 24/1ಎ | – | – | ನಿವೇಶನ | 990 | 91.97 | 13,86,000 | – | 13,86,000 |
| 2 | ಶ್ರೀಮತಿ. ಎನ್.ಲಕ್ಷ್ಮೀ ಕೋಂ ರಾಮು | ಸಾರಕ್ಕಿ ಕೆರೆ | 24/1ಎ | 1ನೇ ನಂ.ಸೈಟ್ | – | ನಿವೇಶನ | 1200 | 111.48 | 16,80,000 | – | 16,80,000 |
| 3 | ಶ್ರೀ. ವೇಣುಗೋಪಾಲ ರೆಡ್ಡಿ ಎಸ್.ವಿ. ಬಿನ್ ಎಸ್.ಎ.ವೆಂಕಟಸ್ವಾಮಿ ರೆಡ್ಡಿ | ಸಾರಕ್ಕಿ ಕೆರೆ | 24/1ಡಿ | 24/1/6/7/8/9 | – | ನಿವೇಶನ | 2220 | 206.23 | 31,08,000 | – | 31,08,000 |
| 4 | ಶ್ರೀ. ಟಿ.ಗೋವಿಂದ ರೆಡ್ಡಿ ಬಿನ್ ಲೇಟ್ ಮುನಿರೆಡ್ಡಿ | ಸಾರಕ್ಕಿ ಕೆರೆ | 24/1ಇ | – | – | ನಿವೇಶನ | 2130 | 197.87 | 29,82,000 | – | 29,82,000 |
| 5 | ಶ್ರೀ. ರಾಮನ್ ಬಿನ್ ರಾಮಕೃಷ್ಣನಾಯ್ಡು | ಸಾರಕ್ಕಿ ಕೆರೆ | 24/4 | – | – | ನಿವೇಶನ | 1050 | 97.545 | 14,70,000 | – | 14,70,000 |
| 6 | ಶ್ರೀ. ಭೈರಪ್ಪ ಬಿನ್ ಲೇಟ್ ಭೈರಪ್ಪ | ಸಾರಕ್ಕಿ ಕೆರೆ | 24/1ಇ | – | – | ನಿವೇಶನ | 300 | 27.87 | 4,20,000 | – | 4,20,000 |
| 7 | ಶ್ರೀ. ಲೋಕನಾಥನ್ ಬಿನ್ ಗಣೇಶ್ | ಸಾರಕ್ಕಿ ಕೆರೆ | 24/3 | 24/3/66 | – | ಆರ್.ಸಿ.ಸಿ. ಕಟ್ಟಡ | 720 | 66.89 | 10,08,000 | 16,40,996 | 26,48,996 |
| 8 | ಶ್ರೀಮತಿ. ರೆಡ್ಡಮ್ಮ ಕೋಂ. ಹೆಚ್.ಬಿ.ರೆಡ್ಡಪ್ಪ | ಸಾರಕ್ಕಿ ಕೆರೆ | – | 6/6/14/1/1 | – | ನಿವೇಶನ | 108 | 10.03 | 1,51,200 | – | 1,51,200 |
| 9 | ಶ್ರೀ. ಪಿ.ಶ್ರೀ ರಾಮಯ್ಯ ಬಿನ್ ಲಕ್ಷ್ಮೀ ನಾರಾಯಣಯ್ಯ | ಸಾರಕ್ಕಿ ಕೆರೆ | – | 37 | 12/2 | ಆರ್.ಸಿ.ಸಿ. ಕಟ್ಟಡ | 240 | 22.29 | 3,36,000 | 2,88,180 | 6,24,180 |
| 10 | ಶ್ರೀ. ಮಹಮದ್ ಶಫೀ ಬಿನ್ ಅಬ್ದುಲ್ ಬಷೀರ್ | ಸಾರಕ್ಕಿ ಕೆರೆ | – | 39 | 12/2 | ಆರ್.ಸಿ.ಸಿ. ಕಟ್ಟಡ | 504 | 46.82 | 7,05,600 | 3,51,642 | 10,57,242 |
| 11 | ಶ್ರೀ. ಹೆಚ್.ಆರ್.ಪ್ರಕಾಶ್ ಬಿನ್ ರಾಜಪ್ಪ | ಸಾರಕ್ಕಿ ಕೆರೆ | – | 1 | 10/3 | ಆರ್.ಸಿ.ಸಿ. ಕಟ್ಟಡ | 352 | 32.70 | 4,92,800 | 1,18,346 | 6,11,146 |
| 12 | ಶ್ರೀ. ಶೇಕ್ ಸಿರಾಜುದ್ದೀನ್ ಬಿನ್ ಶೇಕ್ ಅಬ್ದುಲ್ ಖಾದರ್ | ಸಾರಕ್ಕಿ ಕೆರೆ | – | 9 | 24/1, ಸಿ.ಎಂ.ಸಿ. ಹೊಸ ಖಾತಾ ನಂ.189 | ನಿವೇಶನ | 1100 | 102.19 | 15,40,000 | – | 15,40,000 |

..............................3

| | | | | | | | | | | | |
|---|---|---|---|---|---|---|---|---|---|---|---|
| 13 | ಶ್ರೀ. ಮಹಮದ್ ಅಕ್ಬರ್ ಬಿನ್ ಹಾಜಿ ಅಬ್ದುಲ್ ವಹಾಬ್ | ಸಾರಕ್ಕಿ ಕೆರೆ | – | 1 | 10/2 | ನಿವೇಶನ | 483 | 44.87 | 6,76,200 | – | 6,76,200 |
| 14 | ಶ್ರೀ. ಮಹಮದ್ ಅಕ್ಬರ್ ಬಿನ್ ಹಾಜಿ ಅಬ್ದುಲ್ ವಹಾಬ್ | ಸಾರಕ್ಕಿ ಕೆರೆ | 1 | 1ಎ | 7 ಮತ್ತು 9 | ನಿವೇಶನ | 420 | 39.01 | 5,88,000 | – | 5,88,000 |
| 15 | ಶ್ರೀ. ಕೆ.ಚಂದ್ರಶೇಖರ್ ಬಿನ್ ಲೇಟ್ ಸುಬ್ರಮಣಿ ನಾಯ್ಡು | ಸಾರಕ್ಕಿ ಕೆರೆ | – | 9 | 24/1 | ನಿವೇಶನ | 440 | 40.87 | 6,16,000 | – | 6,16,000 |
| 16 | ಶ್ರೀ. ಎಮ್.ಗೋವಿಂದ ರಾಜು ಬಿನ್ ಲೇಟ್ ಎಮ್.ವಿ.ರಾಜು | ಸಾರಕ್ಕಿ ಕೆರೆ | 4/1 | 4/1/ಎ1 | 4/1/ಎ1 | ಆರ್.ಸಿ.ಸಿ. ಕಟ್ಟಡ | 3682'8'<br>(–)1089<br>2594 | 240.98 | 36,31,600 | 11,94,962 | 48,26,562 |
| 17 | ಶ್ರೀ. ಶಶಿಕಲಾ ಕೋಂ. ಅಂಗಡಿ ನಾಗರಾಜು | ಸಾರಕ್ಕಿ ಕೆರೆ | – | 4 | 24/1/24/2 | ನಿವೇಶನ | 63 | 5.85 | 88,200 | – | 88,200 |
| | **ಒಟ್ಟು** | | | | | | **14914** | **1385.465** | **2,08,79,600** | **35,94,126** | **2,44,73,726** |

..................................4

**1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂ-ಸ್ವಾಧೀನ ಆಸ್ತಿಗಳಿಗೆ ಸರ್ಕಾರದ ಮಾರ್ಗಸೂಚಿ ಬೆಲೆಯನ್ವಯ ಪಾವತಿಸಬೇಕಾದ ಪರಿಹಾರ ಹಾಗೂ ಇತರೆ ವೆಚ್ಚಗಳು ಈ ಕೆಳಗಿನಂತೆ ಇರುತ್ತವೆ.**

**'ಅ'**

| | | |
|---|---|---|
| 1. ಮಾರ್ಗಸೂಚಿ ಬೆಲೆ ಚ.ಅ. 1ಕ್ಕೆ 1,400/- ರೂ.ಗಳಂತೆ | | |
| 2. ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ 14,914 ಚ.ಅ. (1385.465 ಚ.ಮೀ) x 1,400 ರೂ. | 2,08,79,600 | **2,44,73,726** |
| 3. ಭೂಸ್ವಾಧೀನಪಡಿಸಿಕೊಳ್ಳುವ ಕಟ್ಟಡಗಳ ಮೊಬಲಗು | 35,94,126 | |
| 4. ಈ ಬೊಬಲಗಿಗೆ 1894 ಭೂಸ್ವಾಧೀನ ಕಾಯ್ದೆಯನ್ವಯ ಕಲಂ 23(1)(ಎ) ರನ್ವಯ, ಮಾರುಕಟ್ಟೆ ಬೆಲೆಯ ಮೇಲೆ ಸಾಲಿಯಾನ ಶೇ.12 ರಷ್ಟು ಹೆಚ್ಚುವರಿ ಮಾರುಕಟ್ಟೆ ಬೆಲೆ (1 ವರ್ಷಕ್ಕೆ) | | 29,36,847 |
| 5. 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ ಶೇ.30 ರಂತೆ | | 73,42,118 |
| **ಒಟ್ಟು** | | **3,47,52,691** |

**'ಆ'**

**ಇತರೇ ವೆಚ್ಚಗಳು**

| | |
|---|---|
| ಸಿಬ್ಬಂದಿ ವೆಚ್ಚ ಶೇ. 10 ರಷ್ಟು | 34,75,269 |
| ಆಡಿಟ್ ವೆಚ್ಚ ಶೇ.1 ರಷ್ಟು | 3,47,527 |
| ಪ್ರಕಟಣಾ ವೆಚ್ಚ (ಅಂದಾಜು) | 2,00,000 |
| **ಒಟ್ಟು** | **40,22,796** |
| **(ಅ+ಆ)** | **3,87,75,487** |

ಮೇಲ್ಕಂಡ ಸ್ವತ್ತುಗಳ ಭೂಪರಿಹಾರದ ಮೊತ್ತವು (ಅ+ಆ) ಒಟ್ಟು 3,87,75,487 (ರೂ. ಮೂರು ಕೋಟಿ ಎಂಭತ್ತೇಳು ಲಕ್ಷದ ಎಪ್ಪತ್ತೈದು ಸಾವಿರದ ನಾಲ್ಕು ನೂರ ಎಂಭತ್ತೇಳು ರೂ. ಗಳು ಮಾತ್ರ) ಗಳಾಗುತ್ತದೆ.

ಮೇಲ್ಕಂಡ ಸ್ವತ್ತುಗಳನ್ನು 1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲು ತಗಲುವ ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ.3,87,75,487 (ರೂ. ಮೂರು ಕೋಟಿ ಎಂಭತ್ತೇಳು ಲಕ್ಷದ ಎಪ್ಪತ್ತೈದು ಸಾವಿರದ ನಾಲ್ಕು ನೂರ ಎಂಭತ್ತೇಳು ರೂ. ಗಳು ಮಾತ್ರ) ಗಳನ್ನು 2010-11 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-02-2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:15-03-2011 ರ ನಿರ್ಣಯ ಹಾಗೂ ದಿನಾಂಕ:24-02-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:15-03-2011 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08-04-2011 ರ ನಿರ್ಣಯ.

..........................5

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:15-03-2011 ರ ನಿರ್ಣಯ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08-04-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 15-03-2011 ರ ನಿರ್ಣಯ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08-04-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಶಾರದಮ್ಮ)
ಮಹಾಪೌರರು

# ದಿನಾಂಕ:30-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 17 (18)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಸವನಗುಡಿ ಟ್ಯಾಗೋರ್ ವೃತ್ತದಲ್ಲಿ ಟ್ಯಾಗೋರ್ ವೃತ್ತದಿಂದ ಎನ್.ಆರ್.ಕಾಲೋನಿ ಕಡೆಗೆ ಮತ್ತು ಟ್ಯಾಗೋರ್ ವೃತ್ತದಿಂದ ನ್ಯಾಷನಲ್ ಕಾಲೇಜ್ ಕಡೆಗೆ ಕೆಳಸೇತುವೆ ಕಾಮಗಾರಿಗೆ ಒಳಪಡುವ ರಸ್ತೆಯ ಎರಡೂ ಕಡೆ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಅನುಮೋದನೆಗಾಗಿ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಸಾಮಾನ್ಯ ಸಭೆಯ ಮುಂದೆ ದಿನಾಂಕ:15-11-2010 ರಂದು ಟಿಪ್ಪಣಿಯನ್ನು ಮಂಡಿಸಲಾಗಿತ್ತು. ಸದರಿ ಟಿಪ್ಪಣಿಯಲ್ಲಿ ಪಾಲಿಕೆಯ ವಾರ್ಡ್ ನಂಬರುಗಳು ತಪ್ಪಾಗಿ ನಮೂದಾಗಿದ್ದು, ದಿನಾಂಕ:18-03-2011 ರಂದು ನಡೆದ ಪಾಲಿಕೆ ಸಭೆಯ ವಿಷಯ ಸಂಖ್ಯೆ: 06(232)/2010-11 ರಲ್ಲಿಯೂ ಸಹ ಅದೇ ರೀತಿ ವಾರ್ಡ್ ನಂಬರುಗಳು ನಮೂದಾಗಿರುವುದರಿಂದ ಅವುಗಳನ್ನು ಸರಿಪಡಿಸಿ ಈ ಕೆಳಕಂಡಂತೆ ತಿದ್ದುಪಡಿ ಮಾಡಲು ಪಾಲಿಕೆಯ ಸಭೆಯ ಮುಂದೆ ಮಂಡಿಸಲಾಗಿದೆ.

ದಿನಾಂಕ:18-03-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ ಸಂಖ್ಯೆ: 06(232)/2010-11 ರಲ್ಲಿನ ಪುಟ ಸಂಖ್ಯೆ (1) ಪ್ಯಾರಾ ಸಂಖ್ಯೆ 1 ಮತ್ತು 2 ರಲ್ಲಿ ವಾರ್ಡ್ ನಂ. 145 ಹೊಂಬೇಗೌಡನಗರ, ವಾರ್ಡ್ ನಂ. 143 ವಿ.ವಿ.ಪುರಂ (ಹಳೇ ವಾರ್ಡ್ ನಂ.50), ವಾರ್ಡ್ ನಂ.142 ಸುಂಕೇನಹಳ್ಳಿ (ಹಳೇ ವಾರ್ಡ್ ನಂ.49) ಮತ್ತು ವಾರ್ಡ್ ನಂ.154 ಬಸವನಗುಡಿ ಎಂದೂ ಹಾಗೂ ಪುಟ ಸಂಖ್ಯೆ 2 ಮತ್ತು 3 ರಲ್ಲಿನ ಸ್ವತ್ತುಗಳ ಪಟ್ಟಿಯಲ್ಲಿ ಕ್ರಮ ಸಂಖ್ಯೆ 9 ರಿಂದ 14 ರವರೆಗೆ ನಮೂದಾಗಿರುವ ವಾರ್ಡ್ ನಂ. 49/72 ರ ಬದಲಾಗಿ 142 (ಹಳೆ ವಾರ್ಡ್ ನಂ.49), ಬಡಾವಣೆ ಹೆಸರು ಬಸವನಗುಡಿ ವಾರ್ಡ್ ಬದಲಾಗಿ ಸುಂಕೇನಹಳ್ಳಿ ಎಂದು ಹಾಗೂ ಕ್ರಮ ಸಂಖ್ಯೆ 15 ರಿಂದ 18 ರವರೆಗೆ ನಮೂದಾಗಿರುವ ವಾರ್ಡ್ ನಂ.50 ರ ಬದಲಾಗಿ 143 (ಹಳೆ ವಾರ್ಡ್ ನಂ.50) ಎಂದು ಹಾಗೂ ಕ್ರಮ ಸಂಖ್ಯೆ. 19 ರಿಂದ 21 ರವರೆಗೆ ನಮೂದಾಗಿರುವ ವಾರ್ಡ್ ನಂ.153 (50) ರ ಬದಲಾಗಿ 145 ಎಂದು ಹಾಗೂ ಪುಟ ಸಂ. 4 ರಲ್ಲಿನ (2) ಸರ್ಕಾರಿ ಸ್ವತ್ತುಗಳು ಪಟ್ಟಿಯಲ್ಲಿ ಕ್ರಮ ಸಂಖ್ಯೆ 3 ರಲ್ಲಿ ನಮೂದಾಗಿರುವ ವಾರ್ಡ್ ನಂ.50 ರ ಬದಲಾಗಿ 143 (ಹಳೆ ವಾರ್ಡ್ ನಂ.50), ಬಡಾವಣೆ ಹೆಸರು ವಿ.ವಿ.ಪುರಂ, ಕೆ.ಆರ್.ರಸ್ತೆ ಎಂದು ತಿದ್ದುಪಡಿ ಮಾಡುವ ಬಗ್ಗೆ ಅನುಮೋದನೆ ಕೋರಿ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 27-04-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:27-04-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:27-04-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:30-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 18 (20)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಯುಡಿ 26 ಎಂಎನ್‌ಜಿ 1989, ದಿನಾಂಕ:17-07-1990 ಹಾಗೂ 05-07-1990ರ ಅನುಸಾರ ದಿನಾಂಕ: 21-12-1990 ರಿಂದ ಜಾರಿಗೆ ಬರುವಂತೆ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಲಿಮಿಟೆಡ್ ಇವರಿಗೆ ಮಿಲ್ಲರ್ ಟ್ಯಾಂಕ್ ಬೆಡ್ ಪ್ರದೇಶದಲ್ಲಿನ ನಿವೇಶನ ಸಂಖ್ಯೆ 16 "ಇ" ರಲ್ಲಿನ ವಿಸ್ತೀರ್ಣ 9300 ಚದರ ಅಡಿ (1666.60 ಚದರ ಗಜ) ಪ್ರದೇಶವನ್ನು 30 ವರ್ಷಗಳ ಅವಧಿಗೆ ಮಾಸಿಕ ಬಾಡಿಗೆ ರೂ.1,800/- ಗಳನ್ನು ವಿಧಿಸಿ, ಕಟ್ಟಡ ನಿರ್ಮಾಣದ ನಂತರದಲ್ಲಿ ಶೇ.10% ರಷ್ಟು ಹೆಚ್ಚಿಸಿ, ತದನಂತರ ಪ್ರತಿ 5 ವರ್ಷಗಳಿಗೆ ಶೇ.10% ರಷ್ಟು ಹೆಚ್ಚಿಸಿ, ಈ ಕೆಳಕಂಡ ಪ್ರಮುಖ ಷರತ್ತುಗಳ ಮೇಲೆ ಮಂಜೂರಾತಿ ನೀಡಲಾಗಿದೆ.

**ಷರತ್ತು 4:** ಗುತ್ತಿಗೆದಾರರು ಮಂಜೂರು ಮಾಡಲಾದ ನಕ್ಷೆಯ ಅನುಸಾರ ಕಟ್ಟಡವನ್ನು ನಿರ್ಮಿಸತಕ್ಕದ್ದು.

**ಷರತು 7:** ಗುತ್ತಿಗೆದಾರನು ಯಾವುದೇ ಕಾರಣಕ್ಕೂ ಗುತ್ತಿಗೆ ಜಾಗ ಅದರ ಪ್ರದೇಶವನ್ನು ಮರು ಗುತ್ತಿಗೆಗೆ ನೀಡಬಾರದು.

**ಷರತ್ತು 9:** ಗುತ್ತಿಗೆ ನೀಡಿರುವ ಉದ್ದೇಶದ ಹೊರತು ಬೇರೆ ಯಾವುದೇ ಉದ್ದೇಶಕ್ಕೂ ಬಳಸಬಾರದು.

**ಷರತ್ತು 11:** ಯಾವುದೇ ಷರತ್ತು ಉಲ್ಲಂಘಿಸಿದಲ್ಲಿ ಪಾಲಿಕೆಯೂ ನೋಟೀಸ್ ನೀಡಿ, ಗುತ್ತಿಗೆ ಜಾಗ ಮತ್ತು ಅದರಲ್ಲಿರುವ ಕಟ್ಟಡಗಳನ್ನು ಯಾವುದೇ ಪರಿಹಾರವಿಲ್ಲದೇ ಹಿಂಪಡೆಯುವುದು ಎಂಬುದಾಗಿದೆ.

ಮೇಲ್ಕಂಡ ಗುತ್ತಿಗೆಯ ಅವಧಿಯು ದಿನಾಂಕ:20-12-2020 ರಲ್ಲಿ ಮುಗಿಯಲಿದೆ.

ಗುತ್ತಿಗೆದಾರರು ದಿನಾಂಕ:09-10-2010 ರಲ್ಲಿ ಅರ್ಜಿ ಸಲ್ಲಿಸಿ, ದಿನಾಂಕ:06-01-2010 ರಲ್ಲಿ ಪಾಲಿಕೆಯು ಮಂಜೂರಾತಿ ನೀಡಿರುವಂತೆ 5 ಅಂತಸ್ತಿನ ಕಟ್ಟಡ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. ಅವರ ಕಛೇರಿಯ ನಿರ್ವಹಣೆ ಹೊರತುಪಡಿಸಿ, ಉಳಿದ ಹೆಚ್ಚುವರಿ ಕಟ್ಟಡವನ್ನು ಬೇರೆ ಪತ್ರಿಕಾ ಉದ್ಯಮಿಗಳಿಗೆ ಆದ್ಯತೆಯ ಮೇಲೆ ನೀಡಿ, ಉಳಿದ ಕಟ್ಟಡವನ್ನು ಇತರೆಯವರಿಗೆ ಬಾಡಿಗೆ ಆಧಾರ ನೀಡಲು ಅನುಮತಿ ನೀಡಲು ಕೋರಿರುತ್ತಾರೆ. ಈ ಸಂಸ್ಥೆಯು 1947 ರಲ್ಲಿ ಯಾವುದೇ ಲಾಭ ಮತ್ತು ನಷ್ಟವಿಲ್ಲದಂತೆ ನಿರ್ವಹಿಸುವ ಸಂಸ್ಥೆಯಾಗಿದ್ದು, ಆದಾಯ ತೆರಿಗೆ ಮತ್ತು ಸೇವಾ ತೆರಿಗೆಯಿಂದ ವಿನಾಯಿತಿ ಪಡೆದಿರುತ್ತದೆ. ಗುತ್ತಿಗೆ ಕರಾರಿನ ಷರತ್ತು 7 ರ ಪ್ರಕಾರ ಗುತ್ತಿಗೆದಾರನ ಹೊರತು ಇತರೆ ಗುತ್ತಿಗೆದಾರರಿಗೆ ಉಪ ಗುತ್ತಿಗೆ ನೀಡಬಾರದೆಂಬ ಷರತ್ತಿನಿಂದ ವಿನಾಯಿತಿ ನೀಡಲು ಸರ್ಕಾರಕ್ಕೆ ಪ್ರಸ್ತಾಪಿಸಬೇಕಾಗಿರುತ್ತದೆ.

ಸ್ಥಳೀಯ ಅಧಿಕಾರಿಗಳು 2ನೇ ಮತ್ತು 3ನೇ ಮಹಡಿಯನ್ನು ಮಹಾನಗರ ಪಾಲಿಕೆಗೆ ಉಳಿಸಿಕೊಂಡು ಉಳಿದ ಅಂತಸ್ತುಗಳಿಗೆ ಬಾಡಿಗೆ ಹಂಚಿಕೆ ಆಧಾರದ ಮೇಲೆ ಅನುಮತಿ ನೀಡುವ ತೀರ್ಮಾನ ಕೈಗೊಳ್ಳಬೇಕೆಂದು ಪ್ರಸ್ತಾಪಿಸಿರುತ್ತಾರೆ. ಬಾಡಿಗೆ ಹಂಚಿಕೆಗೆ ಸಂಬಂಧಿಸಿದಂತೆ ಸ್ಪಷ್ಟ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ.

ಈ ಹಿನ್ನಲೆಯಲ್ಲಿ ಪಿಟಿಐ ಸಂಸ್ಥೆಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು, ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-03-2011 ರ ಟಿಪ್ಪಣಿ ಹಾಗೂ ಕೃಷಿಕ ಸರ್ವೋದಯ ಫೌಂಡೇಶನ್‌ರವರಿಗೆ ವಾರ್ಡ್ ಸಂಖ್ಯೆ:73 ರ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ನಗರ ಪಾಲಿಕೆ ಜಾಗದ

..........................2

ಸಂಬಂಧ ಸರ್ಕಾರದ ಪತ್ರದ ಸಂಖ್ಯೆ:ನಅಇ/213/ಎಂಎನ್‌ಜಿ/2005, ದಿನಾಂಕ:19–05–2006 ರ ಪತ್ರದಲ್ಲಿ ಸದರಿ ಸಂಸ್ಥೆಯವರು ಹಾಲಿ ಕಟ್ಟಡದ ನೆಲ–1 ಮತ್ತು 2ನೇ ಮಹಡಿಗಳ ಪೈಕಿ 671.76 ಚ.ಮೀ. ಬಾಡಿಗೆಗೆ ನೀಡುತ್ತಿರುವ ಹಿನ್ನಲೆಯಲ್ಲಿ ಮೂಲ ಗುತ್ತಿಗೆದಾರರಿಗೆ ಈಗಾಗಲೇ ನಿಗಧಿಪಡಿಸಿರುವ ಗುತ್ತಿಗೆ ಮೊತ್ತವನ್ನು ಪರಿಷ್ಕರಿಸುವ/ಹೆಚ್ಚಿಸುವ ಷರತ್ತಿಗೊಳಪಟ್ಟು ಗುತ್ತಿಗೆದಾರ ಸಂಸ್ಥೆಯು ಕಟ್ಟಡವನ್ನು ಬಾಡಿಗೆಗೆ ನೀಡುವ ಪ್ರಸ್ತಾವನೆಗೆ ಸರ್ಕಾರದ ಮಂಜೂರಾತಿ ದೊರೆತಿದ್ದು, ಅದರಂತೆ ದಿನಾಂಕ:21–03–2011 ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ರವರಿಗೆ ಮಿಲ್ಲರ್ ಟ್ಯಾಂಕ್ ಬೆಡ್ ಪ್ರದೇಶದಲ್ಲಿ ನೀಡಿರುವ ನಿವೇಶನ ಸಂಖ್ಯೆ. 16 'ಇ' ಸ್ವತ್ತಿಗೂ ವಾರ್ಷಿಕ ಬಾಡಿಗೆ ರೂ.4000/– (ನಾಲ್ಕು ಸಾವಿರ) ಗಳನ್ನು ನಿಗಧಿಪಡಿಸಿ ತದನಂತರ 5 ವರ್ಷಗಳಿಗೊಮ್ಮೆ ಶೇಕಡ 10 ರಷ್ಟು ಹೆಚ್ಚಿಸುವ ಷರತ್ತಿಗೊಳಪಟ್ಟು ಮಂಜೂರಾತಿ ನೀಡುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08–04–2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08–04–2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ವಾರ್ಷಿಕ ಬಾಡಿಗೆ ರೂ.4000/– ಗಳ ಬದಲಾಗಿ ಮಾಸಿಕ ಬಾಡಿಗೆ ರೂ.4000/– ಗಳೆಂಬ ಮಾರ್ಪಡಿನೊಂದಿಗೆ ಸಮಿತಿಯ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08–04–2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ವಾರ್ಷಿಕ ಬಾಡಿಗೆ ರೂ.4000/– ಗಳ ಬದಲಾಗಿ ಮಾಸಿಕ ಬಾಡಿಗೆ ರೂ.4000/– ಗಳೆಂಬ ಮಾರ್ಪಡಿನೊಂದಿಗೆ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:30–05–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 21 (23)/2011–12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಕಾವೇರಿ ಆಶ್ರಮ ವಿದ್ಯಾ ಸಂಸ್ಥೆಯವರಿಗೆ ನಗರ ಪಾಲಿಕೆಯ 125+126/2x50 ಅಡಿಗಳ ಜಾಗವನ್ನು ವರ್ಷಕ್ಕೆ ರೂ.150/– ಗಳಂತೆ ಗುತ್ತಿಗೆಯನ್ನು ನಿಗಧಿಪಡಿಸಿ, ದಿನಾಂಕ: 05–12–1977 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ದಿನಾಂಕ: 04–12–2007ಕ್ಕೆ ಮುಕ್ತಾಯಗೊಂಡಿರುತ್ತದೆ.

ಸದರಿ ಸಂಸ್ಥೆಯವರು ದಿನಾಂಕ:12–09–2006 ರಂದು ಮನವಿ ಸಲ್ಲಿಸಿ, ವಿದ್ಯಾ ಸಂಸ್ಥೆಯು 1964ರಲ್ಲಿ ಒಬ್ಬ ಶಿಕ್ಷಕಿ ಹಾಗೂ ಕೆಲವೇ ಮಕ್ಕಳಿಂದ ಪ್ರಾರಂಭವಾಗಿ, ಕನ್ನಡ ಮಾಧ್ಯಮದಲ್ಲಿ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ನೀಡುತ್ತಿದ್ದು, ಇಂದು ಈ ಸಂಸ್ಥೆಯಡಿಯಲ್ಲಿ ಸುಮಾರು 1350 ಮಕ್ಕಳು ಉಚಿತವಾಗಿ ವಿದ್ಯಾಭ್ಯಾಸ ಪಡೆಯುತ್ತಿದ್ದು, 24 ಮಂದಿ ಬೋಧಕ ಸಿಬ್ಬಂದಿ ವರ್ಗದವರು ಕೆಲಸ ನಿರ್ವಸುತ್ತಿರುತ್ತಾರೆ. ಸದರಿ ಶಾಲೆಯಲ್ಲಿ ಅತ್ಯಂತ ಕಡುಬಡವರು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಕ್ಕಳು ಇಲ್ಲಿ ಕನ್ನಡ ಮಾಧ್ಯಮದಲ್ಲಿ ಉಚಿತ ವ್ಯಾಸಂಗ ಮಾಡುತ್ತಿದ್ದು, ಈ ಹಿಂದೆ ನೀಡಿದ್ದ 30 ವರ್ಷಗಳ ಗುತ್ತಿಗೆ ಅವಧಿಯನ್ನು ಮುಂದಿನ 99 ವರ್ಷಗಳ ಅವಧಿಗೆ ಕಡಿಮೆ ಗುತ್ತಿಗೆ ದರದಲ್ಲಿ ನವೀಕರಿಸಲು ಕೋರಿರುತ್ತಾರೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ವಸತಿಗೆ ಚದರ ಅಡಿ ಒಂದಕ್ಕೆ ರೂ.850 ಗಳಾಗಿದ್ದು, ವಾಣಿಜ್ಯಕ್ಕೆ ಚದರ ಅಡಿ ಒಂದಕ್ಕೆ ರೂ.1190/– ಗಳಾಗಿದ್ದು, ಅರ್ಜಿದಾರರಿಗೆ ಗುತ್ತಿಗೆ ನೀಡಿರುವ ಸ್ವತ್ತಿನ ಅಳತೆ (125'+126')/2x50'=6275 ಚದರ ಅಡಿಗಳಾಗುತ್ತದೆ. ಇದರಂತೆ, ಸ್ವತ್ತಿನ ಮೌಲ್ಯವು ರೂ.74,67,250/– ಗಳಾಗಿರುತ್ತದೆ. ಶೇ.10 ರಂತೆ ಪರಿಗಣಿಸಲಾಗಿ, ವಾರ್ಷಿಕ ಗುತ್ತಿಗೆ ದರವು ರೂ.7,46,725/– ಗಳಾಗಲಿದ್ದು, ಮಾಸಿಕ ಗುತ್ತಿಗೆ ದರವು ರೂ.62,227/– ಗಳಾಗುತ್ತದೆ.

ದಿನಾಂಕ: 01–03–2002ರ ಸುತ್ತೋಲೆಯ ಕ್ರಮ ಸಂಖ್ಯೆ:7(4) ರಂತೆ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ, ಸ್ವತ್ತಿನ ಪ್ರಸಕ್ತ ಸಾಲಿನ ಮಾರುಕಟ್ಟೆ ಬೆಲೆಯ ಕನಿಷ್ಠ ಶೇ.10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು ಹಾಗೂ ಕ್ರಮ ಸಂಖ್ಯೆ:7(5) ರಂತೆ ಅಂಗವಿಕಲರಿಗೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ.100 ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ, ಮೇಲ್ಕಂಡ ಗುತ್ತಿಗೆ ಹಾಗೂ ಸರ್ಕಾರಕ್ಕೆ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗಳಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸಬಹುದಾಗಿರುತ್ತದೆ.

ಈ ಹಿಂದೆ ಇಂತಹ ಲಾಭರಹಿತ ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿರುವ ಉದಯ ಬಾನು ಕಲಾ ಸಂಘ, ಕೆಂಪೇಗೌಡ ನಗರ ಮತ್ತು 51ನೇ ವಾರ್ಡಿನ ಕಟ್ಟೆ ಬಳಗಕ್ಕೂ ಕೂಡ ಮಾರುಕಟ್ಟೆ ದರದಂತೆ, ಗುತ್ತಿಗೆ ನೀಡದೆ ರಿಯಾಯಿತಿ ದರದಲ್ಲಿ ಗುತ್ತಿಗೆ ನೀಡಿರುವ ಪೂರ್ವ ನಿದರ್ಶನಗಳಾಗಿರುತ್ತದೆ. ಈ ಹಿನ್ನಲೆಯಲ್ಲಿ, ಈ ಪ್ರಕರಣದಲ್ಲಿಯೂ ಮೇಲಿನಂತೆ ಗುತ್ತಿಗೆ ದರವನ್ನು ಶೇ. 50 ರಷ್ಟು ಕಡಿಮೆ ಮಾಡಿ, ಅಂದರೆ ಮಾಸಿಕ ಗುತ್ತಿಗೆ ಹಣ ರೂ.31,114 ಗಳನ್ನು ನಿಗಧಿಪಡಿಸಿ ಹಾಗೂ ಪ್ರತಿ ವರ್ಷವು ಶೇ.5 ರಷ್ಟು ಹೆಚ್ಚಿಸುವ ಷರತ್ತಿಗೆ ಒಳಪಡಿಸಿ, ಗುತ್ತಿಗೆ ಅವಧಿಯನ್ನು ದಿನಾಂಕ:05–12–2007 ರಿಂದ 30 ವರ್ಷಗಳ

..........................2

ಅವಧಿಗೆ ನವೀಕರಿಸುವ ಬಗ್ಗೆ, ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 05-10-2010 ರ ಟಿಪ್ಪಣಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:14-12-2010 ರಂದು ಸ್ಥಳ ಪರಿಶೀಲಿಸಲಾಗಿದ್ದು, ಶ್ರೀ. ಕಾವೇರಿ ಆಶ್ರಮ ವಿದ್ಯಾ ಸಂಸ್ಥೆಯಲ್ಲಿ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಹಾಗೂ ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದ ಸುಮಾರು 1400 ಬಡ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಉಚಿತವಾಗಿ ವ್ಯಾಸಂಗ ಮಾಡುತ್ತಿದ್ದು, ಸದರಿ ಸಂಸ್ಥೆ ಲಾಭ ರಹಿತ ಸಂಸ್ಥೆಯಾಗಿರುವುದರಿಂದ ದಿನಾಂಕ:05-10-2010 ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ವಾರ್ಷಿಕ ಗುತ್ತಿಗೆ ಹಣ ರೂ.1000.00 (ಒಂದು ಸಾವಿರ) ಗಳಿಗೆ ನಿಗಧಿಪಡಿಸಿ ದಿನಾಂಕ:05-12-2007 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ಅವಧಿಯನ್ನು ನವೀಕರಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-12-2010 ರ ನಿರ್ಣಯ ಹಾಗೂ ದಿನಾಂಕ:05-10-2010 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-12-2010 ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:05-04-2011 ರ ನಿರ್ಣಯಗಳನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21-12-2010 ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 05-04-2011 ರ ನಿರ್ಣಯಗಳನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:30-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 26 (28)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ-80(91)ರಲ್ಲಿ ನಂ:143 ಧರ್ಮರಾಜ ಕೊಯಿಲ್ ಸ್ಟ್ರೀಟ್, ಬೆಂಗಳೂರು ಇಲ್ಲಿ ಏಕಾಂಬರೇಶ್ವರ ಧರ್ಮರಾಜ ದೇವಸ್ಥಾನ ಟ್ರಸ್ಟ್ ರವರಿಗೆ 6550 ಚದರ ಅಡಿಗಳ ಜಾಗವನ್ನು 99 ವರ್ಷಗಳ ಅವಧಿಗೆ 15-10-1976 ರಿಂದ 14-10-2075 ರವರೆಗೆ ವಾರ್ಷಿಕ ರೂ.11 ಗಳಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರಾತಿ ನೀಡಲಾಗಿರುತ್ತದೆ. ಈ ಸಂಸ್ಥೆಯವರು ಸದರಿ ಸ್ವತ್ತನ್ನು ಕಲ್ಯಾಣ ಮಂಟಪ ಉದ್ದೇಶದೊಂದಿಗೆ ನೆಲ ಅಂತಸ್ತಿನಲ್ಲಿ 1800 ಚದರ ಅಡಿಗಳಷ್ಟು ಬಟ್ಟೆ ಅಂಗಡಿಗಳಿಗಾಗಿ ಮತ್ತು 1ನೇ ಅಂತಸ್ತಿನಲ್ಲಿ 2000 ಚದರ ಅಡಿಗಳಷ್ಟು ಕಟ್ಟಡವನ್ನು ಇಂಡಿಯನ್ ಬ್ಯಾಂಕ್‌ಗೆ ಬಾಡಿಗೆಗೆ ನೀಡಿರುವುದು ಸ್ಥಳ ಪರಿಶೀಲನೆಯಿಂದ ತಿಳಿದು ಬಂದಿರುತ್ತದೆ.

ಸಂಸ್ಥೆಯವರು ತಮ್ಮ ಹೇಳಿಕೆಯಲ್ಲಿ ಗುತ್ತಿಗೆ ಪಡೆದ ಉದ್ದೇಶಕ್ಕೆ ಕಲ್ಯಾಣ ಮಂಟಪ ನಿರ್ಮಿಸಲು ಆರ್ಥಿಕವಾಗಿ ಸಾಧ್ಯವಾಗದೇ ಇದ್ದ ಅನಿವಾರ್ಯ ಸನ್ನಿವೇಶದಲ್ಲಿ ಸ್ಥಳೀಯ ಸಮುದಾಯದ ವ್ಯಾಪಾರಸ್ಥರಿಂದ ಮುಂಗಡ ಧನ ಸಹಾಯವನ್ನು ಪಡೆದು, ಈ ಮುಂಗಡ ಹಣವನ್ನು ಅಂಗಡಿಯ ಬಾಡಿಗೆ ರೂಪದಲ್ಲಿ ಭರಿಸುವ ಷರತ್ತಿನ ಮೇಲೆ ಕಟ್ಟಡದ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗಿರುತ್ತದೆ. ಇದರಿಂದ, ಬರುವ ಬಾಡಿಗೆಯಿಂದ ದೇವಸ್ಥಾನದ ದಿನನಿತ್ಯ ಹಾಗೂ ಕಾಲಕಾಲಕ್ಕೆ ನಡೆಯುವ ಪರಂಪರಾಗತ ಧಾರ್ಮಿಕ ಚಟುವಟಿಕೆಗಳನ್ನು ನಡೆಸುವುದಲ್ಲದೇ ಸಮುದಾಯದ ಆರ್ಥಿಕವಾಗಿ ಹಿಂದುಳಿದವರ ಮಕ್ಕಳ ಶೈಕ್ಷಣಿಕ ಉದ್ದೇಶಗಳಿಗೆ ಹಾಗೂ ವೈದ್ಯಕೀಯ ಸಹಾಯ, ವಿಧವೆಯರು, ವೃದ್ಧರು ಮತ್ತು ಪ್ರಕೃತಿ ವಿಕೋಪದಿಂದ ಆಗುವ ಅನಾಹುತಗಳಿಗೆ ಸಹಾಯಕ್ಕಾಗಿ ಬಳಸಲಾಗುತ್ತಿದೆ ಎಂದು ತಿಳಿಸಿರುತ್ತಾರೆ. 2008-09ನೇ ಸಾಲಿನಲ್ಲಿ ರೂ.1,52,963/-ಗಳು ಮತ್ತು 2009-10ನೇ ಸಾಲಿನಲ್ಲಿ ರೂ.1,61,011/- ಗಳನ್ನು ಪಾಲಿಕೆಗೆ ಕಂದಾಯ ಹಾಗೂ ಇತ್ಯಾದಿ ಸಂದಾಯ ಮಾಡಲಾಗಿರುತ್ತದೆ.

ವಾರ್ಷಿಕವಾಗಿ ಈ ಸಂಸ್ಥೆಗೆ 5.70 ಲಕ್ಷ ಆದಾಯ ಬರುತ್ತಿದ್ದು ನಿರ್ವಹಣೆ ಮತ್ತು ಇತರೆ ಖರ್ಚು ರೂ.2.90 ಲಕ್ಷಗಳನ್ನು ಸಮುದಾಯದ ರಚನಾತ್ಮಕ ಕಾರ್ಯಗಳಿಗೆ ಬಳಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ ರೂ. 11/- ಗಳಿಗೆ ಬದಲಾಗಿ, 30 ಸಾವಿರ ರೂಪಾಯಿಗಳನ್ನಾಗಿ ತಿದ್ದುಪಡಿಗೆ ಮಂಜೂರಾತಿ ನೀಡಬೇಕೆಂದು ಕೋರಿರುತ್ತಾರೆ. ಸ್ಥಳೀಯ ನಗರ ಸಭಾ ಸದಸ್ಯರು ದಿನಾಂಕ: 22-02-2011 ರಂದು ನೀಡಿರುವ ಪತ್ರದಲ್ಲಿ ಸಂಸ್ಥೆಯು ಆದಾಯ ಹಾಗೂ ಸಮುದಾಯದ ರಚನಾತ್ಮಕ ಕಾರ್ಯಗಳನ್ನು ನಿರ್ವಹಿಸಲು ವಾಣಿಜ್ಯ ಉದ್ದೇಶಗಳಿಗೆ ಬಳಸಿಕೊಂಡಿರುವ ಕಾರ್ಯವನ್ನು ಸಕ್ರಮಗೊಳಿಸಿ ಅವರ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಗುತ್ತಿಗೆ ಮೊತ್ತವನ್ನು ಪರಿಷ್ಕರಿಸಲು ಕೋರಿರುತ್ತಾರೆ. ಸ್ಥಳೀಯ ಅಧಿಕಾರಿಗಳು ಸಹಾ ಈ ಪ್ರಸ್ತಾವನೆಗೆ ಅಗತ್ಯ ಆದೇಶ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ, ವಾಣಿಜ್ಯ ಉದ್ದೇಶಕ್ಕೆ ಬಳಸಲಾಗಿರುವ ಪ್ರದೇಶ 3800 ಚದರ ಅಡಿಗಳಿಗೆ ಪರಿಷ್ಕೃತ ದರ ವಿಧಿಸುವುದು ಅವಶ್ಯಕವಾಗಿರುತ್ತದೆ. ಪಾಲಿಕೆಯ ಸುತ್ತೋಲೆ ದಿನಾಂಕ:01-03-2002ರ ಅನುಸಾರ ಮಾರುಕಟ್ಟೆ ಬೆಲೆಯನ್ನು 10% ರಷ್ಟು ಗುತ್ತಿಗೆ ಬೆಲೆಯನ್ನು ನಿಗಧಿಪಡಿಸಲು ಅವಕಾಶವಿದ್ದು, ಶೇ: 100% ರಷ್ಟು ಸಮಾಜ ಸೇವೆಯಲ್ಲಿರುವ ಸಂಸ್ಥೆಗಳಿಗೆ ರಿಯಾಯಿತಿ ನೀಡುವ ಅವಕಾಶವಿರುತ್ತದೆ.

ಈ ದೇವಸ್ಥಾನದ ಕಲ್ಯಾಣ ಮಂಟಪ ಕಟ್ಟಡವು ಶಿವಾಜಿನಗರದ ಧರ್ಮರಾಜ್ ಕೊಯಿಲ್ ರಸ್ತೆಯಲ್ಲಿ ಇದ್ದು, 2007ನೇ ಸಾಲಿನ ಸರ್ಕಾರಿ ಆದೇಶದಂತೆ ಪ್ರತಿ ಚದರ ಅಡಿಗೆ ರೂ. 2000/- ಗಳ ಮಾರುಕಟ್ಟೆ ಬೆಲೆ ಇದ್ದು, ವಾಣಿಜ್ಯ ಉದ್ದೇಶ ಮತ್ತು ಮೂಲೆ ನಿವೇಶನ ಇರುವುದರಿಂದ ಶೇ.40+10 ಹೆಚ್ಚಿಸುವ ಅವಕಾಶವಿದ್ದು, ಇದರಂತೆ 3800 ಚದರ ಅಡಿಗಳ ಪ್ರದೇಶಕ್ಕೆ ವಾರ್ಷಿಕ ಬಾಡಿಗೆ ರೂಪಾಯಿ 1,14,00,000/- ಗಳಾಗಲಿದ್ದು ಹಾಗೂ ಮಾಹೆಯಾನ ಬಾಡಿಗೆ ರೂ.95,000/- ಆಗುವುದು.

..........................2

ಸಂಸ್ಥೆಯು ಸಮುದಾಯದ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳಿಗೆ ನೆರವಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸ್ಥಳೀಯ ಪಾಲಿಕೆ ಸದಸ್ಯರು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಮೂಲ ಗುತ್ತಿಗೆ ಜಾಗಕ್ಕೆ ಇರುವ ದರದೊಂದಿಗೆ ವಾಣಿಜ್ಯ ಉದ್ದೇಶಕ್ಕೆ ಬಳಸಲಾಗಿರುವ 3800 ಚದರ ಅಡಿ ಜಾಗಕ್ಕೆ ಸೂಕ್ತ ದರ ಪರಿಷ್ಕರಣೆ ಮಾಡಿ ಸಕ್ರಮಗೊಳಿಸಲು ಈ ಕೆಳಕಂಡ ಷರತ್ತು ವಿಧಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಪಾಲಿಕೆ ಸಭೆಯ ನಿರ್ಣಯದೊಂದಿಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗುತ್ತದೆ.

<u>ಷರತ್ತು:</u> "ಗುತ್ತಿಗೆ ಸಂಸ್ಥೆಯ ಆಡಳಿತ ಮಂಡಳಿಯ ಸಭೆಗಳಲ್ಲಿ ಸ್ಥಳೀಯ ಪಾಲಿಕೆಯ ಸದಸ್ಯರು ಮತ್ತು ಸಹ ಕಂದಾಯ ಅಧಿಕಾರಿರವರನ್ನು ವಿಶೇಷ ಆಹ್ವಾನಿತರನ್ನಾಗಿ ಕರೆಯತಕ್ಕದ್ದು, ಯಾವುದೇ ಕಾರಣಕ್ಕೂ ಗುತ್ತಿಗೆ ನೀಡಲಾಗಿರುವ ಉದ್ದೇಶ ಹಾಗೂ ಅನುಮತಿಸಲಾಗಿರುವ ವಾಣಿಜ್ಯ ಉದ್ದೇಶಗಳಿಗೆ ಮಾರ್ಪಡಿಸಬಾರದು ಹಾಗೂ ಸಂಸ್ಥೆಗೆ ಬರುವ ಆದಾಯವನ್ನು ಸಂಪೂರ್ಣವಾಗಿ ದೇವಸ್ಥಾನ ಮತ್ತು ಕಲ್ಯಾಣ ಮಂಟಪದ ನಿರ್ವಹಣೆ, ಅಭಿವೃದ್ಧಿ ಹಾಗೂ ಧಾರ್ಮಿಕ ಚಟುವಟಿಕೆಗಳು ಮತ್ತು ಅರ್ಹ ಸಮುದಾಯದ ಶೈಕ್ಷಣಿಕ, ಸಾಮಾಜಿಕ ಚಟುವಟಿಕೆಗಳಿಗೆ ಮಾತ್ರ ಬಳಸತಕ್ಕದ್ದು" ಎಂಬ ನಿಬಂಧನೆಗಳನ್ನು ವಿಧಿಸಬಹುದಾಗಿದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಧರ್ಮರಾಜ ದೇವಸ್ಥಾನ ಟ್ರಸ್ಟ್ ರವರಿಗೆ ಗುತ್ತಿಗೆಯನ್ನು ಪರಿಷ್ಕೃತ ದರ ನಿಗಧಿಪಡಿಸಿ ಸಕ್ರಮಗೊಳಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10-03-2011 ರ ಟಿಪ್ಪಣಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಪರಿಶೀಲಿಸಲಾಗಿದ್ದು, ದಿನಾಂಕ:10-03-2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08-04-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08-04-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ವಾರ್ಷಿಕ ಗುತ್ತಿಗೆ ಮೊತ್ತ ರೂ.30,000/- ಗಳ ಬದಲಾಗಿ ವಾರ್ಷಿಕ ಗುತ್ತಿಗೆ ಮೊತ್ತ ರೂ.50,000/- ಗಳಿಗೆ ಮಾರ್ಪಡಿಸಿ, ಸಮಿತಿಯ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08-04-2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ವಾರ್ಷಿಕ ಗುತ್ತಿಗೆ ಮೊತ್ತ ರೂ.30,000/- ಗಳ ಬದಲಾಗಿ ವಾರ್ಷಿಕ ಗುತ್ತಿಗೆ ಮೊತ್ತ ರೂ.50,000/- ಗಳಿಗೆ ಮಾರ್ಪಡಿಸಿ, ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ:31-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ : 01 (33)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:18-05-2011 ನೀಡಲಾದ ಆದೇಶದಂತೆ, ಓ.ಎಫ್.ಸಿ. ಕೇಬಲ್ ನಿರ್ವಹಣೆ ಕುರಿತಂತೆ ಈ ಕೆಳಕಂಡ ಸದಸ್ಯರೊಂದಿಗೆ ಪ್ರಧಾನ ಅಭಿಯಂತರರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿಯನ್ನು ರಚಿಸಲಾಗಿದೆ.

1) ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
2) ಶ್ರೀ. ಎನ್.ಆರ್.ರಮೇಶ್, ಸದಸ್ಯರು, ವಾರ್ಡ್ 167, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.
3) ಮುಖ್ಯ ಅಭಿಯಂತರರು, ಪೂರ್ವ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
4) ಮಾನ್ಯ ಆಯುಕ್ತರ ತಾಂತ್ರಿಕ ಸಲಹೆಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
5) ತಾಂತ್ರಿಕ ಸಲಹೆಗಾರರು, ಮಾಹಿತಿ ತಂತ್ರಜ್ಞಾನ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮೇಲ್ಕಂಡ ಸದಸ್ಯರುಗಳನ್ನೊಳಗೊಂಡ ಕಮಿಟಿಯು ದಿನಾಂಕ:19-05-2011 ರಂದು ಮಾನ್ಯ ಆಯುಕ್ತರ ತಾಂತ್ರಿಕ ಸಲಹೆಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿಯಲ್ಲಿ ಸಭೆ ಸೇರಿ ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸಲು ಅನುಸರಿಸುತ್ತಿರುವ ಕಾರ್ಯ ವಿಧಾನಗಳನ್ನು ಕೂಲಂಕುಶವಾಗಿ ಚರ್ಚಿಸಿ ಈ ಕೆಳಕಂಡಂತೆ ಕಾರ್ಯ ತಂತ್ರವನ್ನು ಅಳವಡಿಸಲು ಶಿಫಾರಸ್ಸು ಮಾಡಲಾಯಿತು.

- ಪ್ರಸ್ತುತ ಅಂತರ್‌ಜಾಲ/ದೂರವಾಣಿ ಮತ್ತಿತರೆ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಸಂಸ್ಥೆಗಳು ಕಳೆದ ಹತ್ತು ವರ್ಷಗಳಿಂದ ಬೆಂಗಳೂರು ಮಹಾನಗರದಲ್ಲಿ ಅಳವಡಿಸಿರುವ ಕೇಬಲ್‌ಗಳ ವಿವರಗಳನ್ನು 15 ದಿನಗಳ ಕಾಲಾವಕಾಶ ನೀಡಿ ಸದರಿ ಸಂಸ್ಥೆಗಳಿಂದ ಪಡೆಯುವುದು.

- ಈ ಪ್ರಕಾರವಾಗಿ ವಿವರಗಳನ್ನು ದೃಢೀಕೃತ ಪ್ರಮಾಣ ಪತ್ರದ ಮೂಲಕ ಪಡೆಯುವುದರಿಂದ ಸದರಿ ಸಂಸ್ಥೆಗಳು ಅಧಿಕೃತ ಹಾಗೂ ಅನಧಿಕೃತವಾಗಿ ಕೇಬಲ್‌ಗಳನ್ನು ಅಳವಡಿಸಿರುವ ಬಗ್ಗೆ ಸಂಪೂರ್ಣ ಮಾಹಿತಿಗಳನ್ನು ಪಡೆಯಬಹುದಾಗಿರುತ್ತದೆ.

- ಈ ಪ್ರಮಾಣ ಪತ್ರದಲ್ಲಿ ಸಂಸ್ಥೆಯು ಯಾವುದೇ ಸಂಸ್ಥೆಯು ಕೇಬಲ್‌ಗಳನ್ನು ಅನಧಿಕೃತವಾಗಿ ಅಳವಡಿಸಿದ್ದಲ್ಲಿ ಶೇಕಡ 300% ರಷ್ಟು (@ ರೂ.900/- ಪ್ರತಿ ಮೀಟರ್‌ಗೆ) ವಸೂಲಿ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಎಲ್ಲಾ ರೀತಿಯ ಅಧಿಕಾರವಿರುತ್ತದೆ ಹಾಗೂ ಈ ಪ್ರಮಾಣ ಪತ್ರದಲ್ಲಿ ಯಾವುದೇ ಸತ್ಯ ಮಾಹಿತಿಯನ್ನು ಮರೆಮಾಚಿದ್ದಲ್ಲಿ ಅಂತಹ ಕೇಬಲ್‌ಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮುಟ್ಟುಗೋಲು ಹಾಕಿಕೊಂಡು ಕಾನೂನಿನ್ವಯ ಕಠಿಣ ಕ್ರಮ ಹಾಗೂ ಹೆಚ್ಚಿನ ದಂಡವನ್ನು ವಿಧಿಸಬಹುದಾಗಿರುತ್ತದೆ.

- ದಿನಾಂಕ:07-02-2011 ರಿಂದ ದಿ:28-02-2011 ರ ನಡುವಿನ ಅವಧಿಯಲ್ಲಿ ಯಾವುದೇ ರೀತಿಯ ಅನುಮತಿಯನ್ನು (ಅಂದರೆ ಪ್ರತಿ ಗುಂಡಿಗೆ ರೂ.15,000 ದರ ನಿಗಧಿಪಡಿಸಿ) ನೀಡಿದ್ದಲ್ಲಿ ತತ್‌ಕ್ಷಣ ರದ್ದುಗೊಳಿಸಿ ಹಿಂಪಡೆಯಬೇಕಾಗಿರುತ್ತದೆ.

......................2

- ಒಂದು ವೇಳೆ ಈ ಅವಧಿಯಲ್ಲಿ ಅನುಮತಿ ಪಡೆದಿರುವ ಕಾಮಗಾರಿಯನ್ನು ಪೂರ್ಣಗೊಳಿಸಿದ್ದಲ್ಲಿ ಸಂಬಂಧಪಟ್ಟ ಓ.ಎಫ್.ಸಿ. ಸಂಸ್ಥೆ ಅಥವಾ ಗುತ್ತಿಗೆದಾರರಿಂದ ಮಾನ್ಯ ಕೌನ್ಸಿಲ್‌ನಿಂದ ಅನುಮೋದಿತವಾದ ಹೊಸ ದರದಂತೆ ರೂ.300 ಪ್ರತಿ ಮೀಟರ್‌ಗೆ ವಸೂಲಿ ಮಾಡಲು ಮೂಲ ಕಡತವನ್ನು ಪ್ರಧಾನ ಅಭಿಯಂತರರಿಗೆ ಕಳುಹಿಸಿ ಓ.ಎಫ್.ಸಿ ಸಂಸ್ಥೆಯವರಿಗೆ ಅನುಮತಿಗಾಗಿ ಪ್ರಧಾನ ಅಭಿಯಂತರರ ಕಛೇರಿಗೆ ಬೇಟಿ ಮಾಡಲು ಸೂಚಿಸಬೇಕು.

- ಸದರಿ ಓ.ಎಫ್.ಸಿ ಸಂಸ್ಥೆಯವರು ಕಳೆದ ಹತ್ತು ವರ್ಷದಿಂದ ತಹಲ್‌ವರೆಗೆ ಪಾವತಿಸಿರುವ ಆದಾಯ ತೆರಿಗೆ, ವಾಣಿಜ್ಯ ತೆರಿಗೆ, ಸೇವಾ ತೆರಿಗೆ ಹಾಗೂ ಸರ್ಕಾರದ ಇತರೆ ತೆರಿಗೆಗಳನ್ನು ಪಾವತಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಡೀಕೃತ ವರದಿ ಹಾಗೂ ಸಂಪೂರ್ಣ ವಿವರಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.

- ಓ.ಎಫ್.ಸಿ ಸಂಸ್ಥೆಗಳು ಪಾಲಿಕೆಗೆ ಸಲ್ಲಿಸಿದ ಮೇಲ್ಕಂಡ ಪ್ರಮಾಣ ಪತ್ರಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಒಂದು ಸ್ವತಂತ್ರ ತಂಡವನ್ನು ಟಿ.ವಿ.ಸಿ.ಸಿ ವಿಭಾಗದ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸಲು ರಚಿಸಬೇಕಾಗಿರುತ್ತದೆ ಹಾಗೂ ಇನ್ನೊಂದು ತನಿಖಾ/ಪರಿಶೀಲನಾ ತಂಡವನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಸೂಕ್ತ ಅಧಿಕಾರ ಪ್ರತ್ಯೋಜನೆಯನ್ನು ಮಾಡಲು ಸೂಚಿಸಬಹುದಾಗಿರುತ್ತದೆ ಹಾಗೂ ಈ ವಿವರಗಳನ್ನು ಪರಿಶೀಲಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದಲೂ ಸಹ ವಿಭಾಗ/ಉಪ ವಿಭಾಗವಾರು ಮಟ್ಟದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳ ನೇತೃತ್ವದಲ್ಲಿಯೂ ಸಹ ತಂಡಗಳನ್ನು ರಚಿಸಿ ಅವರ ವ್ಯಾಪ್ತಿಯಲ್ಲಿ ಈ ಸಂಬಂಧಪಟ್ಟ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ನೀಡಲು ಸೂಕ್ತ ಆದೇಶ ನೀಡಬಹುದಾಗಿರುತ್ತದೆ.

- ಈ ತಂಡದ ವಲಯಕ್ಕೆ ಒಂದರಂತೆ ವಾಹನಗಳನ್ನು, GPS ಯಂತ್ರ ಹಾಗೂ ವೈಯರ್‌ಲೆಸ್ ಸಾಧನದೊಂದಿಗೆ ಸೂಕ್ತ ತಾಂತ್ರಿಕ ಹಾಗೂ ಭದ್ರತಾ ಸಿಬ್ಬಂದಿಯೊಂದಿಗೆ ಸಂಚರಿಸಿ ಅನಧಿಕೃತ ರಸ್ತೆ ಅಗೆತ ಹಾಗೂ ರಸ್ತೆಗಳ ಮೇಲೆ ಅನಧಿಕೃತವಾಗಿ ಮಣ್ಣು ಹಾಗೂ ಕಟ್ಟಡದ ಅವಶೇಷಗಳನ್ನು ತಂದು ಹಾಕುವವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬಹುದಾಗಿರುತ್ತದೆ.

- ಕೌನ್ಸಿಲ್ ನಿರ್ಣಯದಂತೆ, ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸುವ ಪ್ರಸ್ತಾವನೆಗಳು ವಿಶೇಷ ಆಯುಕ್ತರಿಂದ ಅನುಮೋದನೆಗೊಂಡ ನಂತರ ಪ್ರಧಾನ ಅಭಿಯಂತರರಿಂದ ಕೇಬಲ್‌ಗಳನ್ನು ಅಳವಡಿಸಲು ಅನುಮತಿಯನ್ನು ನೀಡಲು ಸೂಚಿಸಬಹುದಾಗಿರುತ್ತದೆ.

  1) ಈ ವ್ಯವಸ್ಥೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಬಹುದೊಡ್ಡ ಸಮಸ್ಯೆಯಾಗಿರುವ ರಸ್ತೆ ಅಗೆತದ ಕೆಲಸದ ಮೇಲೆ ಸಹ ನಿಯಂತ್ರಣ ಹಾಗೂ ವಿವರಗಳನ್ನು ಪಡೆದಂತಾಗುತ್ತದೆ. ಇದೇ ತರಹದ ವ್ಯವಸ್ಥೆಯು ಪ್ರಸ್ತುತ ಗುಜರಾತ್ ರಾಜ್ಯದ ಅಹಮದಬಾದ್ ನಗರದಲ್ಲಿ ಜಾರಿಯಲ್ಲಿದೆ. ಇದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಒಂದು ತಂಡವು ಭೇಟಿ ಮಾಡಿ, ಪಾಲಿಕೆಯಲ್ಲಿಯೂ ಸಹ ಇದನ್ನು ಅಳವಡಿಸಲು ಸೂಕ್ತ ಕಾರ್ಯ ತಂತ್ರವನ್ನು ಅಳವಡಿಸಿಕೊಂಡಲ್ಲಿ ಸಹಕಾರಿಯಾಗುತ್ತದೆ.

  2) ಇದಲ್ಲದೆ ರಸ್ತೆ ಅಗೆತದ, ಅಂದರೆ ಕೇಬಲ್ ಅಳವಡಿಕೆ ಸಂಬಂಧಪಟ್ಟ ಪರವಾನಿಗೆಗಳನ್ನು ನೀಡುವಾಗ ಆನ್ ಲೈನ್ ವ್ಯವಸ್ಥೆಯ ಮುಖಾಂತರ ನೀಡಬೇಕೆಂದು ಕಡ್ಡಾಯ ಮಾಡಿದ್ದಲ್ಲಿ ಇದರ ಮಾಹಿತಿಯು ಎಲ್ಲಾ ವಲಯದ ಅಭಿಯಂತರುಗಳಿಗೆ ಏಕ ಕಾಲದಲ್ಲಿ ಲಭ್ಯವಿರುತ್ತದೆ. ಇದರಿಂದ

ಯಾವುದೇ ರೀತಿಯ ಅನಧಿಕೃತ ಕೇಬಲ್ ಅಳವಡಿಸುವ ಕಾರ್ಯವನ್ನು ತಡೆಗಟ್ಟಲು ಹಾಗೂ ಪಾಲಿಕೆಯಲ್ಲಿ ಈ ಕೆಲಸದ ಬಗ್ಗೆ ಸಂಪೂರ್ಣ ಮಾಹಿತಿ ಲಭ್ಯವಿರುತ್ತದೆ.

3) ಪ್ರಸ್ತುತ ಪ್ರಸ್ತಾವನೆಯಲ್ಲಿ ಪ್ರತಿ ಮೀಟರ್‌ಗೆ ರೂ.300/– ಅನ್ನು (ಕೇಬಲ್ ಅಳವಡಿಸಲು) ಆರಂಭಿಕ ವೆಚ್ಚವೆಂದು ಸಂಬಂಧಪಟ್ಟ ಏಜೇನ್ಸಿಗಳು ಪಾಲಿಕೆಗೆ ಕೇಬಲ್ ಅಳವಡಿಕೆಗೆ ಮುಂಚೆ ಪಾವತಿ ಮಾಡಬೇಕಾಗುತ್ತದೆ. ಆದರೆ, ಈ ಭೂಗತ ಕೇಬಲ್‌ಗಳು ಭೂಮಿಯೊಳಗೆ ಶಾಶ್ವತವಾಗಿ ಅಳವಡಿಸುವುದರಿಂದ ಪಾಲಿಕೆಯು ಸದರಿ ಜಾಗವನ್ನು ಯಾವುದೇ ರೀತಿಯ ಅನ್ಯ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳಲು ಸಾಧ್ಯವಿರುವುದಿಲ್ಲ. ಆದ್ದರಿಂದ, ಸದರಿ ಜಾಗಕ್ಕೆ ಪಾಲಿಕೆಯು ಈ ಏಜೆನ್ಸಿಗಳ ಮೇಲೆ ಮಾಸಿಕ ಬಾಡಿಗೆಯನ್ನು ಅತಿ ಕಡಿಮೆ ದರದಲ್ಲಿ ಅಂದರೆ ರೂ.120/– ಪ್ರತಿ ಮೀಟರ್‌ಗೆ ಮಾಹೆಯಾನ ವಿಧಿಸಬಹುದಾಗಿರುತ್ತದೆ. ಈ ಮಾಸಿಕ ಬಾಡಿಗೆಯನ್ನು ವರ್ಷದ ಪ್ರಾರಂಭದಲ್ಲಿಯೇ ವರ್ಷ ಪೂರ್ತಿ ಮುಂಚಿತವಾಗಿ ಪಡೆಯಲು ಸೂಕ್ತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ. ಕೆಲವು ಕಡೆ ಕೋರ್ ಕಮಿಟಿಯ ಸದಸ್ಯರ ಗಮನಕ್ಕೆ ಬಂದ ವಿಷಯದ ಆಧಾರದ ಮೇಲೆ ಸದರಿ ಸಂಸ್ಥೆಗಳು ತಮ್ಮ ಗ್ರಾಹಕರಿಗೆ ಪ್ರತಿ ಮೀಟರ್‌ಗೆ 100 ರಿಂದ 140 ರವರೆಗೆ ವಿಧಿಸುತ್ತಿರುವ ಅನೇಕ ನಿದರ್ಶನಗಳಿದ್ದು, ಇದನ್ನು ಜಾರಿಗೊಳಿಸಿದಲ್ಲಿ ಪಾಲಿಕೆಯ ಆದಾಯವು ಗಮನಾರ್ಹವಾಗಿ ಹೆಚ್ಚಳವಾಗುವ ಬಹಳಷ್ಟು ಸಾಧ್ಯತೆಗಳಿವೆ.

4) ಈ ಮೇಲ್ಕಂಡ ಅಂಶಗಳನ್ನು ಅಳವಡಿಸಿಕೊಂಡು ಪ್ರಸ್ತುತ ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸಿದ ನಂತರ ಪಾಲಿಕೆಯು ಶಾಶ್ವತ ಪರಿಹಾರಕ್ಕಾಗಿ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದಾಗಿರುತ್ತದೆ. ಇದಕ್ಕಾಗಿ ಪಾಲಿಕೆಯ ಒಂದು ಕೇಬಲ್ ಡಕ್ಟ್ ಅನ್ನು (4 ಅಡಿ ಅಗಲ 8 ಅಡಿ ಆಳ) ರಸ್ತೆಯ ಉದ್ದಗಲಕ್ಕೂ ರಸ್ತೆಯ ಮಧ್ಯ ಭಾಗದಲ್ಲಿ ಅಥವಾ ರಸ್ತೆಯ ಬದಿಯಲ್ಲಿ ನಿರ್ಮಿಸಿದ್ದಲ್ಲಿ ಈ ಕೇಬಲ್ ಅಳವಡಿಕೆಯ ಸಂಸ್ಥೆಗಳಿಗೆ ಇದರಲ್ಲಿ ಸೂಕ್ತ ಸ್ಥಳಾವಕಾಶ ಕೊಡಲು ನೆರವಾಗುತ್ತದೆ. ಇದರಿಂದ ಮುಂದಿನ ಭವಿಷ್ಯದಲ್ಲಿ ರಸ್ತೆ ಅಗೆತ ಮತ್ತು ಇತರ ಸಂಬಂಧಿತ ನಿರ್ವಹಣೆ ಕೆಲಸವನ್ನು ಬಹುತೇಕ ಕಡಿಮೆ ಮಾಡಬಹುದಾಗಿದೆ. ಈ ವ್ಯವಸ್ಥೆಯು ಅನೇಕ ಮುಂದುವರೆದ ದೇಶಗಳಲ್ಲಿ ಈಗಾಗಲೇ ಜಾರಿಯಲ್ಲಿರುತ್ತದೆ. ಈ ವ್ಯವಸ್ಥೆಯನ್ನು ತತ್‌ಕ್ಷಣದಿಂದ ಹೊಸದಾಗಿ ನಿರ್ಮಿಸುತ್ತಿರುವ ರಸ್ತೆಗಳಲ್ಲಿ ಅಥವಾ ರಸ್ತೆ ಅಗಲೀಕರಣದ ವೇಳೆ ಕೈಗೊಳ್ಳಬಹುದಾಗಿರುತ್ತದೆ.

5) ಇನ್ನು ಮುಂದೆ ಓ.ಎಫ್.ಸಿ ಕೇಬಲ್ ಅನ್ನು ಅಳವಡಿಸಲು ಪರವಾನಿಗೆಯನ್ನು ಪಡೆಯಲು ಸಂಬಂಧಪಟ್ಟ ಸಂಸ್ಥೆಯ ಪ್ರಸ್ತಾವನೆಯನ್ನು ನೇರವಾಗಿ ಕಂಪನಿಯ ಮುಖ್ಯಸ್ಥರೇ ಸಲ್ಲಿಸಬೇಕು. ಗುತ್ತಿಗೆದಾರರು/ಸಬ್ ಏಜೆನ್ಸಿಯವರ ಪರವಾನಗಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವಂತಿಲ್ಲ.

6) ಓ.ಎಫ್.ಸಿ ಕೇಬಲ್ ಅಳವಡಿಸುವ ಸಂಸ್ಥೆಗಳಿಂದ ಸಂಪೂರ್ಣ ವಿವರಗಳನ್ನು ಪಡೆದುಕೊಂಡ ನಂತರ, ಸದರಿ ವಿವರಗಳನ್ನು ವ್ಯವಸ್ಥಿತವಾಗಿ ದಾಖಲಿಸಲು ಪಾಲಿಕೆಯ GIS map ನಲ್ಲಿ ಅಳವಡಿಸಬೇಕಾಗಿರುತ್ತದೆ. ಆದುದರಿಂದ, ಈ ವ್ಯವಸ್ಥೆಯನ್ನು ಜಾರಿಗೊಳಿಸಲು ಮಾಹಿತಿ ತಂತ್ರಜ್ಞಾನ ವಿಭಾಗದೊಡನೆ ಒಂದು GIS ತಂಡವನ್ನು ರಚಿಸಿ, ಮಾಹಿತಿಯನ್ನು ಅಳವಡಿಸಿ ನಂತರ, ಬರುವ ಪ್ರಸ್ತಾವನೆಗಳನ್ನು Real time ಅಳವಡಿಸಲು ಸೂಕ್ತ ಕ್ರಮ ಕೈಗೊಂಡಲ್ಲಿ, ಸದರಿ ವ್ಯವಸ್ಥೆಯಲ್ಲಿಯ ಲೋಪದೋಷಗಳನ್ನು ಸರಿಪಡಿಸಿ ಪ್ರಸ್ತುತ ವ್ಯವಸ್ಥೆಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಬಹುದಾಗಿರುತ್ತದೆ.

7) ಪ್ರಸ್ತುತ ಕೇಬಲ್ ಅಳವಡಿಕೆಯ ಪರವಾನಿಗೆಯನ್ನು ನೀಡುವ ವ್ಯವಸ್ಥೆಯನ್ನು ಇನ್ನು ಮುಂದೆ ಸೂಕ್ತ ರೀತಿಯ ತಂತ್ರಾಂಶವನ್ನು ತಯಾರು ಮಾಡಿ, ಇದನ್ನು ಆನ್ ಲೈನ್ ಮುಖಾಂತರ ನಿರ್ವಹಿಸಿದಲ್ಲಿ,

......................4

ಪಾಲಿಕೆಯ ಆದಾಯದಲ್ಲಿ ಸೋರಿಕೆಯನ್ನು ತಡೆಗಟ್ಟಲು ಸಹಾಯವಾಗುತ್ತದೆ ಹಾಗೂ ಇದರಿಂದ ಪಾಲಿಕೆಯ ಆದಾಯವು ಸಹ ಹೆಚ್ಚಳವಾಗುತ್ತದೆ. ಈ ರೀತಿಯ ತಂತ್ರಾಂಶದಲ್ಲಿ, ಸಂಬಂಧಪಟ್ಟ ಸಂಸ್ಥೆಗಳು ಪರವಾನಗಿ ಶುಲ್ಕವನ್ನು ನೇರವಾಗಿ RTGS/NEFT ರೀತಿಯಲ್ಲಿ ಪಾಲಿಕೆಯ ಖಾತೆಗೆ ನೇರವಾಗಿ ಜಮಾ ಮಾಡುವ ರೀತಿಯಲ್ಲಿ ವ್ಯವಸ್ಥೆಯನ್ನು ಜಾರಿಗೊಳಿಸಬೇಕಾಗಿರುತ್ತದೆ. ಈ ತಂತ್ರಾಂಶವನ್ನು ತಯಾರು ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾಹಿತಿ ತಂತ್ರಜ್ಞಾನ ಇಲಾಖೆಗೆ (ಪ್ರಧಾನ ಅಭಿಯಂತರರ ಕಛೇರಿಯ ಸಹಯೋಗದೊಂದಿಗೆ) ನಿರ್ದೇಶನವನ್ನು ನೀಡಬಹುದಾಗಿದೆ.

8) ಮೇಲ್ಕಂಡ ಮಾಹಿತಿಯು ಓ.ಎಫ್.ಸಿ ಅಳವಡಿಸುವ ಬಗ್ಗೆ ಇದ್ದು, ಇದಲ್ಲದೆ ದೂರದರ್ಶನ ಕೇಬಲ್ ನಿರ್ವಹಣೆ (ಟಿ.ವಿ ಕೇಬಲ್ ಆಪರೇಟರ್) ಮಾಡುವವರು ಮನೋರಂಜನೆ ತೆರಿಗೆ ಪಾವತಿಸುತ್ತಿರುವುದರಿಂದ ಪ್ರತಿಯೊಬ್ಬ ನಿರ್ವಹಣೆದಾರರು ವಾರ್ಷಿಕವಾಗಿ ಪಾಲಿಕೆಗೆ ರೂ.4,800/- (ಪ್ರತಿ ನಿರ್ವಹಣೆದಾರರು) ಪಾವತಿಸಿ ವಾರ್ಷಿಕ ಅನುಮತಿ ಪಡೆಯುವುದು.

9) ಟಿ.ವಿ. ಕೇಬಲ್ ನಿರ್ವಹಣೆದಾರರು ದೂರದರ್ಶನ ಕೇಬಲ್ ಅಲ್ಲದೆ ಅಂತರ್ಜಾಲ (ಇಂಟರ್ ನೆಟ್) ಸೌಲಭ್ಯ ಒದಗಿಸುತ್ತಿರುವುದರಿಂದ ಅಂತಹ ಸಂಸ್ಥೆಗಳು, ಓ.ಎಫ್.ಸಿ. ಸಂಸ್ಥೆಗಳಂತೆ ಪಾಲಿಕೆಗೆ ಶುಲ್ಕ ವಿಧಿಸುತ್ತಿರುವ ವ್ಯಾಪ್ತಿಗೆ ಒಳಪಡುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳಿಗೆ ಪಾಲಿಕೆಯ ಸಭೆಯ ಅನುಮೋದನೆ ಕೋರಿ ಮಂಡಿಸಿರುವ ಆಯುಕ್ತರವರ ದಿನಾಂಕ:27-05-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:27-05-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಪಿ.ಎನ್.ಸದಾಶಿವ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:27-05-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:31-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 02 (34)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರಾಜರಾಜೇಶ್ವರಿ ನಗರ ವಲಯದ ಬಂಗಾರಪ್ಪನಗರ, ಜವರೇಗೌಡನ ದೊಡ್ಡಿ ಮತ್ತು ಡಿಸೌಜಾ ನಗರಗಳಿಗೆ ಸಂಪರ್ಕ ಕಲ್ಪಿಸುವ ಸುತ್ತಮುತ್ತಲಿನ ರಸ್ತೆಗಳು ಹಾಗೂ ಜವರೇಗೌಡನ ದೊಡ್ಡಿ ರಸ್ತೆಯನ್ನು ಕೆಂಚೇನ ಹಳ್ಳಿ ಮುಖ್ಯ ರಸ್ತೆಯಿಂದ ಬಂಗಾರಪ್ಪ ನಗರ ಮುಖಾಂತರ ನೈಸ್ ರಸ್ತೆ ಅಂಡರ್ ಪಾಸ್‌ವರೆಗೂ ಅಗಲೀಕರಣ ಮತ್ತು ಸಬಲೀಕರಣಗೊಳಿಸಲು ಯೋಜನಾ ವರದಿ ತಯಾರಿಸಲಾಗಿದೆ. ಯೋಜನಾ ವರದಿಯನ್ನು ತಯಾರಿಸಲು ಮೆ॥ ಆಲ್‌ಕಾನ್ ಕನ್ಸಲ್‌ಟೆಂಟ್ಸ್ ಅಂಡ್ ಆರ್ಕಿಟೆಕ್ಟ್ಸ್ ರವರ ಸೇವೆಯನ್ನು ಪಡೆದುಕೊಂಡು ಯೋಜನಾ ವರದಿಯನ್ನು ತಯಾರಿಸಲಾಗಿದೆ. ಪ್ರಸ್ತಾಪಿಸಿರುವ ರಸ್ತೆಗಳು ಪ್ರಮುಖ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವ ಅತಿ ಮುಖ್ಯರಸ್ತೆಗಳಾಗಿದ್ದು, ಹಾಲಿ ಇರುವ ರಸ್ತೆಗಳು ಇಕ್ಕಟ್ಟಾಗಿದ್ದು, ಕೆಲವು ಕಡೆ ಅಗಲೀಕರಣಗೊಳಿಸುವ ಅನಿವಾರ್ಯತೆ ಇದೆ. ರಸ್ತೆಯ ಗುಣಮಟ್ಟಕ್ಕೆ ಅನುಗುಣವಾಗಿ ಸಿ.ಬಿ.ಆರ್ ಮತ್ತು ಬಿ.ಬಿ.ಡಿ ಟೆಸ್ಟ್‌ಗಳನ್ನು ಮಾಡಿಸಿ ಅದರಂತೆ, Crust thickness ಅನ್ನು ಯೋಜನಾ ವರದಿಯಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದು ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ರವರು ತಿಳಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಜವರೇಗೌಡನ ದೊಡ್ಡಿ ರಸ್ತೆಯ ಅಗಲೀಕರಣ ಮತ್ತು ಸಬಲೀಕರಣಗೊಳಿಸಲು (ಕೆಂಚೇನಹಳ್ಳಿ ಮುಖ್ಯ ರಸ್ತೆಯಿಂದ ಬಂಗಾರಪ್ಪನಗರ ಮುಖಾಂತರ ನೈಸ್ ರಸ್ತೆ ಅಂಡರ್‌ಪಾಸ್‌ವರೆಗೆ ಹೊಸಕೆರೆಹಳ್ಳಿ ಕೆರೆ ಹತ್ತಿರ) ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅಂದಾಜು ಮೊತ್ತ ರೂ.495.70 ಲಕ್ಷಗಳಾಗಿದ್ದು, ಸದರಿ ಕಾಮಗಾರಿಗೆ ಸೂಕ್ತ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 31-03-2011 ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08-04-2011 ರ ನಿರ್ಣಯ ಹಾಗೂ ಆಯುಕ್ತರವರ ದಿನಾಂಕ:31-03-2011 ರ ಟಿಪ್ಪಣಿಯನ್ನು ಒಪ್ಪುತ್ತಾ, ಸೂಚಿತ ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್ ಕರೆದಲ್ಲಿ ಕಾಲವಿಳಂಬವಾಗುವ ಸಾಧ್ಯತೆ ಇದ್ದು ಹಾಗೂ ಮಳೆಗಾಲಕ್ಕೂ ಮುನ್ನಾ ನಿರ್ವಹಿಸುವ ಅಗತ್ಯತೆ ಬಹಳವಿರುವುದರಿಂದ, ಸರ್ಕಾರ ಆದೇಶ ಸಂಖ್ಯೆ:ನಅಇ/89/ಎಂ.ಎನ್.ವೈ/2011, ದಿನಾಂಕ:11-03-2011 ರ ಆದೇಶವನ್ನು ಅನುಸರಿಸಿ ಸದರಿ ಕಾಮಗಾರಿಯನ್ನು ಅತೀ ತುರ್ತು ಎಂದು ಪರಿಗಣಿಸಿ, ಅತ್ಯಾದ್ಯತೆ ಮೇಲೆ ಉದ್ದೇಶಿತ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿ, ಕೌನ್ಸಿಲ್ ಸಭೆಯ ಅನುಮೋದನೆಯನ್ನು ನಿರೀಕ್ಷಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಕಾಮಗಾರಿಯನ್ನು ತಕ್ಷಣ ಕೈಗೆತ್ತಿಕೊಂಡು ನಿರ್ವಹಿಸುವಂತೆ ತೀರ್ಮಾನಿಸಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:19-05-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ದಿನಾಂಕ:19-05-2011 ರ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದು".

ಶ್ರೀ.ಪಿ.ಎನ್.ಸದಾಶಿವ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

......................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ದಿನಾಂಕ:19-05-2011ರ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ

(ಶಾರದಮ್ಮ)

ಮಹಾಪೌರರು

# ದಿನಾಂಕ:31–05–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 29 (31)/2011–12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊಸ ವಾರ್ಡ್ ಸಂಖ್ಯೆ:90 (ಹಳೆಯ ವಾರ್ಡ್ ಸಂಖ್ಯೆ:81) ಹಲಸೂರು ಕೆರೆಯಲ್ಲಿ ದೋಣಿ ವಿಹಾರ ಶುಲ್ಕ ವಸೂಲಾತಿಯ ಹಕ್ಕನ್ನು ಗುತ್ತಿಗೆ ಆಧಾರದ ಮೇರೆಗೆ ದಿನಾಂಕ:01–7–2007 ರಿಂದ 30–06–2008 ರವರೆಗೆ ಒಂದು ವರ್ಷದ ಅವಧಿಗೆ ವಾರ್ಷಿಕ ಗುತ್ತಿಗೆ ಹಣ ರೂ.1,50,000/– ಗಳನ್ನು ನಿಗಧಿಪಡಿಸಿ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತರವರಿಗೆ ನೀಡಲಾಗಿತ್ತು.

ಅವಧಿ ಮುಗಿದ ನಂತರ, ಕೆ.ಎಸ್.ಟಿ.ಡಿ.ಸಿ. ರವರಿಗೆ ದೋಣಿ ವಿಹಾರವನ್ನು ಸ್ಥಗಿತಗೊಳಿಸಲು ದಿನಾಂಕ:21–08–2008, 20–10–2008 ಮತ್ತು 25–09–2009 ರಂದು ಅಂತಿಮ ತಿಳುವಳಿಕೆ ಪತ್ರಗಳನ್ನು ನೀಡಲಾಗಿರುತ್ತದೆ.

ಸದರಿಯವರು ದಿನಾಂಕ:30–06–2008 ರವರೆಗಿನ ಗುತ್ತಿಗೆ ಮೊತ್ತವನ್ನು ದಿನಾಂಕ:27–10–2007 (ರೂ.50,000/– ಗಳು), 01–09–2008 (ರೂ.50,000/– ಗಳು) ಮತ್ತು ದಿನಾಂಕ:08–09–2009 (ರೂ.50,000/– ಗಳು) ಗಳನ್ನು ಪಾವತಿ ಮಾಡಿರುತ್ತಾರೆ.

ದಿನಾಂಕ:25–08–2010 ರಂದು ಗುತ್ತಿಗೆ ನೀಡಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ವತ್ತುಗಳ ಸಂರಕ್ಷಣೆಗೆ ರಚಿಸಿರುವ ಸಮಿತಿಯು ಜಂಟಿ ಆಯುಕ್ತರು (ಪೂರ್ವ) ರವರ ಕಛೇರಿಯಲ್ಲಿ ಸಭೆಯನ್ನು ಆಯೋಜಿಸಿದ್ದು, ಸಭೆಯ ನಂತರ ನಡೆಸಿದ ತಪಾಸಣೆ ಕಾರ್ಯದ ವೇಳೆ ಹಲಸೂರು ಕೆರೆಯನ್ನು ತಪಾಸಣೆ ಮಾಡಿದ ವೇಳೆಯಲ್ಲಿ ದೋಣಿ ವಿಹಾರವನ್ನು ಸದರಿ ಸಂಸ್ಥೆಯವರು ನಡೆಸುತ್ತಿರುವುದು ಕಂಡು ಬಂದಿದ್ದು, ಈ ಬಗ್ಗೆ ಗುತ್ತಿಗೆ ಅವಧಿ ಮುಗಿದ ನಂತರವೂ ಸಹ ದೋಣಿ ವಿಹಾರವನ್ನು ನಡೆಸುತ್ತಿರುವುದನ್ನು ಆಕ್ಷೇಪಿಸಿರುತ್ತಾರೆ. ಸದರಿ ಸಂಸ್ಥೆಯವರಿಗೆ ಗುತ್ತಿಗೆ ಅವಧಿ ಮುಗಿದ ನಂತರ ದೋಣಿ ವಿಹಾರವನ್ನು ನಡೆಸಲು ಅಧಿಕೃತವಾಗಿ ಯಾವುದೇ ಅನುಮತಿಯನ್ನು ನೀಡಿಲ್ಲವೆಂಬುದನ್ನು ಸಮಿತಿಯ ಗಮನಕ್ಕೆ ತರಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತರವರು ದಿನಾಂಕ:13–09–2010 ರಂದು ಪತ್ರ ಸಲ್ಲಿಸಿ, ದೋಣಿ ವಿಹಾರವನ್ನು ನಡೆಸಲು ಅನುಮತಿಯನ್ನು ಹಾಗೂ ಗುತ್ತಿಗೆ ಅವಧಿಯನ್ನು 10 ವರ್ಷಕ್ಕೆ ಮುಂದುವರೆಸಲು ಕೋರಿರುತ್ತಾರೆ.

ದಿನಾಂಕ:14–09–2010 ರಂದು ಜಂಟಿ ಆಯುಕ್ತರು (ಪೂರ್ವ) ರವರು ವ್ಯವಸ್ಥಾಪಕ ನಿರ್ದೇಶಕರ ಕೋರಿಕೆಯನ್ನು ಪರಿಗಣಿಸಬಹುದೆಂದು ಸೂಚಿಸಿದ್ದು ಹಾಗೂ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:21–09–2010 ರಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಮನವಿಯನ್ನು ಪರಿಗಣಿಸಿ, ದೋಣಿ ವಿಹಾರದ ಗುತ್ತಿಗೆಯನ್ನು ದಿನಾಂಕ:01–07–2008 ರಿಂದ ಐದು ವರ್ಷಗಳಿಗೆ ವಿಸ್ತರಿಸಿ, ವಾರ್ಷಿಕ ಗುತ್ತಿಗೆ ಮೊತ್ತವನ್ನು ರೂ.2,00,000/– (ರೂ.ಎರಡು ಲಕ್ಷ ಮಾತ್ರ) ಗಳಿಗೆ ನಿಗಧಿಪಡಿಸಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗೆ ಮಂಡಿಸಬಹುದೆಂದು ಸೂಚಿಸಿದ್ದು, ಮಾನ್ಯ ಆಯುಕ್ತರು ದಿನಾಂಕ:23–09–2010 ರಂದು ಅನುಮೋದಿಸಿರುತ್ತಾರೆ.

1) ಕೆ.ಎಸ್.ಟಿ.ಡಿ.ಸಿ. ಸಂಸ್ಥೆಯು ದೋಣಿ ವಿಹಾರಗಳ ಸಂರಕ್ಷಣೆ ಕುರಿತು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ತಪ್ಪಿದ್ದಲ್ಲಿ ಸಂಸ್ಥೆಯನ್ನೇ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.
2) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರೆವಿನ್ಯೂ ಇಲಾಖೆ ವತಿಯಿಂದ ವಿಧಿಸುವ ಶುಲ್ಕವನ್ನು ಕಾಲಕಾಲಕ್ಕೆ ಪಾವತಿಸುವುದು.

...........................2

3) ದೋಣಿ ವಿಹಾರ ಕೇಂದ್ರದ ಸ್ವಚ್ಛತೆಯನ್ನು ಕಾಪಾಡುವುದು.
4) ವಾಕಿಂಗ್ ಮತ್ತು ಗಾಳಿ ಸೇವನೆಗಾಗಿ ಬರುವ ಸಾರ್ವಜನಿಕರಿಗೆ ದೋಣಿ ವಿಹಾರ ಚಟುವಟಿಕೆಯಿಂದ ಯಾವುದೇ ತೊಂದರೆಯಾಗದಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು.
5) ಎಂ.ಇ.ಜಿ. ರಕ್ಷಣಾ ಇಲಾಖೆ, ತೋಟಗಾರಿಕೆ ಸಿಬ್ಬಂದಿ ಹಾಗೂ ಕಾಮಗಾರಿ ಇಲಾಖೆಗಳೊಂದಿಗೆ ಸಹಕರಿಸುವುದು ಹಾಗೂ ಕೆರೆಯ ಶುಚಿತ್ವ ಹೂಳೆತ್ತುವ (Dewedding) ಸಲುವಾಗಿ ದೋಣಿಯನ್ನು ಒದಗಿಸುವುದು.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಸರ್ಕಾರದ ಒಂದು ಅಧೀನ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಂಸ್ಥೆ ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡು, ಕೆರೆಯ ದೋಣಿ ವಿಹಾರ ಶುಲ್ಕ ವಸೂಲಾತಿಯ ಹಕ್ಕಿನ ಗುತ್ತಿಗೆಯನ್ನು 2 ಹಸಿರು ಮನೆಗಳು ಮತ್ತು ದ್ವೀಪ ಸೇರಿ ದಿನಾಂಕ:01-07-2008 ರಿಂದ 5 ವರ್ಷಗಳ ಅವಧಿಗೆ ಮಾತ್ರ ಅಂದರೆ ದಿನಾಂಕ: 01-07-2008 ರಿಂದ 31-08-2013 ರವರೆಗೆ ಹಾಲಿ ಇರುವ ರೂ.1,50,000/- ಗಳಿಂದ ರೂ.2,00,000/- ಗಳಿಗೆ ಹೆಚ್ಚಿಸಿ, ವಾರ್ಷಿಕ ಗುತ್ತಿಗೆ ಹಣವನ್ನು ನಿಗಧಿಪಡಿಸಿ, ಗುತ್ತಿಗೆ ನವೀಕರಿಸುವ ಬಗ್ಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:09-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:15-03-2011 ರ ನಿರ್ಣಯ ಹಾಗೂ ದಿನಾಂಕ:09-12-2010 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:15-03-2011 ರ ನಿರ್ಣಯವನ್ನು ಒಪ್ಪುತ್ತಾ, ಐದು ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವುದೆಂದು ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:08-04-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಹಾಲಿ ನೀಡಿರುವ ಗುತ್ತಿಗೆ ಅವಧಿ ಮುಗಿದಿರುವುದರಿಂದ, ದೋಣಿ ವಿಹಾರ ನಡೆಸಲು ಗುತ್ತಿಗೆಯನ್ನು ಹರಾಜು ಮುಖಾಂತರ ಕೈಗೊಳ್ಳುವುದೆಂದು ಈ ಸಭೆಯು ತೀರ್ಮಾನಿಸಿತು".

ಶ್ರೀ.ಪಿ.ಎನ್.ಸದಾಶಿವ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಹಾಲಿ ನೀಡಿರುವ ಗುತ್ತಿಗೆ ಅವಧಿ ಮುಗಿದಿರುವುದರಿಂದ, ದೋಣಿ ವಿಹಾರ ನಡೆಸಲು ಗುತ್ತಿಗೆಯನ್ನು ಹರಾಜು ಮುಖಾಂತರ ಕೈಗೊಳ್ಳುವುದೆಂದು ಈ ಸಭೆಯು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ:31-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ : 30 (32)/2011-12**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಅರಕೆರೆ ಮೈಕೋ ಲೇಔಟ್, ಬಿ.ಎಂ.ಟಿ.ಸಿ. ಬಸ್ ನಿಲ್ದಾಣದ ಪಕ್ಕದಲ್ಲಿರುವ ಪಾರ್ಕ್‌ನ ಒಂದು ಭಾಗದಲ್ಲಿನ 8x8 ಅಡಿಗಳ ಜಾಗವನ್ನು ನಂದಿನಿ ಹಾಲಿನ ಉತ್ಪನ್ನಗಳ ಮಾರಾಟ ಮಳಿಗೆ ಸ್ಥಾಪಿಸಲು ಅನುಮತಿ ನೀಡುವಂತೆ, ಶ್ರೀ ಲಿಂಗೇಗೌಡ ರವರು ಕೋರಿರುತ್ತಾರೆ.

ಅರ್ಜಿದಾರರು ಈ ಜಾಗವನ್ನು ನಂದಿನಿ ಹಾಲಿನ ಉತ್ಪನ್ನಗಳ ಮಾರಾಟ ಮಳಿಗೆ ಸ್ಥಾಪಿಸಲು ಕೋರಿದ್ದು, ಅರ್ಜಿದಾರರು ನಿರುದ್ಯೋಗಿಯಾಗಿರುವುದರಿಂದ, 5 ವರ್ಷಗಳ ಅವಧಿಗೆ ಸ್ಥಳವನ್ನು ಗುತ್ತಿಗೆ ನೀಡಬಹುದಾಗಿ, ಸ್ಥಾಯಿ ಸಮಿತಿಗಳ ಮುಂದೆ ಟಿಪ್ಪಣಿ ಮಂಡಿಸಲು ವಲಯಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ-1976 ರ ಕಲಂ-176ರ (6) ಹಾಗೂ (ಬಿ) 11ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ: ಉ.ಆ(ಕಂ)/ಪಿ.ಆರ್/115/01-02, ದಿನಾಂಕ: 01-03-2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ, ಪ್ರಸಕ್ತ ಸಾಲಿನ ಮಾರುಕಟ್ಟೆ ಬೆಲೆಯ ಕನಿಷ್ಠ ಶೇ:10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 17-04-2007ರ ಸರ್ಕಾರದ ಮಾರ್ಗಸೂಚಿಯಂತೆ, ಚದರ ಅಡಿ ಒಂದಕ್ಕೆ ವಸತಿಯೇತರ ಉದ್ದೇಶಕ್ಕೆ ರೂ.2,240/-ಗಳಿದ್ದು, ಅರ್ಜಿದಾರರು ಕೋರಿರುವ 8x8 ಅಡಿಗಳ ಜಾಗದ ಒಟ್ಟು ವಿಸ್ತೀರ್ಣ 64 ಚದರ ಅಡಿಗಳಾಗುತ್ತದೆ. ಇದರಂತೆ 64x2240 = ರೂ. 1,43,360/- ಗಳಾಗಲಿದ್ದು, ಶೇ10% ರಂತೆ ವಾರ್ಷಿಕ ಗುತ್ತಿಗೆ ಹಣ ರೂ. 14,336/- ಗಳಾಗುತ್ತದೆ ಹಾಗೂ ಮಾಸಿಕ ಗುತ್ತಿಗೆ ಹಣ ರೂ. 1,200/- ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ದಿನಾಂಕ:02-06-2003 ರ ಮಾರ್ಗಸೂಚಿಯಲ್ಲಿ ಪಾಲಿಕೆ ಸ್ವತ್ತುಗಳನ್ನು ಕ್ರಯದ ಆಧಾರದ ಮೇಲೆ ನೀಡಿದಲ್ಲಿ, ಮಾರುಕಟ್ಟೆ ದರ ಹಾಗೂ ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದು ಇರುತ್ತದೆ.

ಈ ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಗುತ್ತಿಗೆ ನೀಡುವ ಸಂಬಂಧಪಟ್ಟ ಪ್ರಕರಣಗಳನ್ನು ಸ್ಥಾಯಿ ಸಮಿತಿಗಳ ಮುಂದಿರಿಸಲು ಸೂಚಿಸಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ/222/ಎಂ.ಎನ್.ವೈ/2008, ದಿನಾಂಕ:03-09-2009 ರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಬರುವ ಸಾರ್ವಜನಿಕ ಸರ್ಕಾರಿ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲಿ ಅಥವಾ ಮಾರಾಟ ಮಾಡುವ ಬದಲಾಗಿ ಅವುಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಅನುಮೋದನೆ ಪಡೆಯಬೇಕಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಲಿಂಗೇಗೌಡರವರಿಗೆ ನಂದಿನಿ ಹಾಲಿನ ಉತ್ಪನ್ನ ಮಾರಾಟ ಮಳಿಗೆ ಸ್ಥಾಪಿಸಲು ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ

............................2

ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯ ಹಾಗೂ ದಿನಾಂಕ:23-12-2010 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:14-03-2011 ರ ನಿರ್ಣಯ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25-01-2011 ರ ನಿರ್ಣಯ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:14-03-2011 ರ ನಿರ್ಣಯಗಳನ್ನು ಒಪ್ಪುವುದು".

ಶ್ರೀ.ಪಿ.ಎನ್.ಸದಾಶಿವ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ:</u>** "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 25-01-2011 ರ ನಿರ್ಣಯ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:14-03-2011 ರ ನಿರ್ಣಯಗಳನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ

(ಶಾರದಮ್ಮ)

ಮಹಾಪೌರರು

# ದಿನಾಂಕ:31-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 31 (19)/2011-12

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ರಸ್ತೆಗಳ ವಲಯ ಕಛೇರಿಯ ಕಟ್ಟಡದ 5ನೇ ಮಹಡಿ ಮತ್ತು 6ನೇ ಮಹಡಿಯ ನಿರ್ಮಾಣದ ಕಾಮಗಾರಿಗೆ ಸಂಬಂಧಿಸಿದಂತೆ, ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:647/09-10 ದಿನಾಂಕ:09-04-2010 ರನ್ವಯ ಪ್ರಸ್ತಾಪಿತ ಕಾಮಗಾರಿಯ ಒಟ್ಟು ಅಂದಾಜು ಮೊತ್ತ ರೂ.300.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತಾರೆ. ಅದರಂತೆ, ಮುಖ್ಯ ಲೆಕ್ಕಾಧಿಕಾರಿಗಳು ಪಿ0467 ರ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ.300.00 ಲಕ್ಷಗಳಿಗೆ ಕಾಮಗಾರಿ ಸಂಕೇತವನ್ನು ನೀಡಿರುತ್ತಾರೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರು ನೀಡಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ E-procurement ಮೂಲಕ ಗುತ್ತಿಗೆದಾರರನ್ನು ನೇಮಿಸಲು ಟೆಂಡರ್ ಅಧಿಸೂಚನೆಯನ್ನು ಹೊರಡಿಸಲು ಅಧೀಕ್ಷಕ ಅಭಿಯಂತರರು (ಬೃಹತ್ ರಸ್ತೆಗಳು) ರವರಿಂದ ಅನುಮತಿಯನ್ನು ಪಡೆದು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಈ ಕೆಳಕಂಡ ಗುತ್ತಿಗೆದಾರರುಗಳು ಭಾಗವಹಿಸಿರುತ್ತಾರೆ.

1. SRI. B N GIRISH (SKS INFRASTRUCTURES PVT. LTD)
2. SRI. K NAGARAJ MADHYASTA (WARSAW ENGINEERS)
3. SRI. K DAMODAR

ಮೇಲ್ಕಂಡ ಮೂರು ಗುತ್ತಿಗೆದಾರರ ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿ, ಮೂವರು ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹಗೊಂಡಿರುವುದರಿಂದ ದಿನಾಂಕ:17-02-2011 ರಂದು Sri. B N Girish (SKS Infrastructures Pvt. Ltd.), Sri. K Nagaraj Madhyasta (WARSAW Engineers) ಮತ್ತು Sri. K Damodar ಇವರುಗಳ Financial bid ವಿವರಗಳನ್ನು ಪರಿಶೀಲಿಸಿದಾಗ, ಗುತ್ತಿಗೆದಾರರು ವಿವಿಧ ಅಂಶಗಳಿಗೆ ನಮೂದಿಸಿರುವ ದರಗಳನ್ನು 2010-11 ನೇ ಸಾಲಿನ ಕರ್ನಾಟಕ ಲೋಕೋಪಯೋಗಿ ಇಲಾಖೆಯ ಬೆಂಗಳೂರು ವೃತ್ತದ ದರಸೂಚಿಗೆ ಹೋಲಿಸಿದಲ್ಲಿ, ಗುತ್ತಿಗೆದಾರರು ನಮೂದಿಸಿರುವ ಒಟ್ಟು ಮೊತ್ತ ಹಾಗೂ ಶೇಕಡವಾರು ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ ಸಂ. | ಗುತ್ತಿಗೆದಾರರ ಹೆಸರು | ಗುತ್ತಿಗೆಗೆ ಇಡಲಾದ ಮೊತ್ತ (ರೂ.ಗಳಲ್ಲಿ) (SR of 2010-11) | ಗುತ್ತಿಗೆದಾರರು ನಮೂದಿಸಿರುವ ಮೊತ್ತ (ರೂ. ಗಳಲ್ಲಿ) | ಗುತ್ತಿಗೆಗೆ ಇಡಲಾದ ಮೊತ್ತಕ್ಕೆ ಹೋಲಿಸಿದಾಗ ಶೇಕಡ ಹೆಚ್ಚುವರಿ |
|---|---|---|---|---|
| 1 | Sri. B N Girish (SKS Infrastructures Pvt. Ltd.) | 2,95,06,775.00 | 3,48,13,289.00 | +17.98 |
| 2 | Sri. K Nagaraj Madhyasta (WARSAW Engineers) | 2,95,06,775.00 | 3,53,70,061.00 | +19.87 |
| 3 | Sri. K Damodar | 2,95,06,775.00 | 3,58,53,941.00 | +21.51 |

...........................2

ಸದರಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರಾದ Sri. B N Girish (SKS Infrastructures Pvt. Ltd.) ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಸದರಿಯವರು ನಮೂದಿಸಿರುವ ಒಟ್ಟು ಮೊತ್ತ ರೂ.3,48,13,289.00 ಗಳನ್ನು 2010-11 ನೇ ಸಾಲಿನ ಕರ್ನಾಟಕ ಲೋಕೋಪಯೋಗಿ ಇಲಾಖೆಯ ಬೆಂಗಳೂರು ವೃತ್ತದ ದರಸೂಚಿಗೆ ಹೋಲಿಸಿದಾಗ ಶೇಕಡ +17.98 ರಷ್ಟು ಹೆಚ್ಚುವರಿಯಾಗಿದ್ದು, ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ. ಬಿ.ಎನ್.ಗಿರೀಶ್ ರವರನ್ನು ದಿನಾಂಕ: 23-02-2011 ರಂದು ಸಂಧಾನ ಸಭೆಗೆ ಹಾಜರಾಗಲು ಸೂಚಿಸಲಾಗಿದ್ದು, ಸದರಿ ಗುತ್ತಿಗೆದಾರರು ಸಂಧಾನ ಸಭೆಯಲ್ಲಿ ಹಾಜರಾಗಿ ಈಗಾಗಲೇ ನಮೂದಿಸಿರುವ ಶೇ.+17.98 (ಮೊತ್ತ ರೂ.3,48,13,289.00) ರಿಂದ ಶೇ.+14.98 ರಷ್ಟು (ಮೊತ್ತ ರೂ.3,39,26,890.00) ಗಳಿಗೆ ಇಳಿಸಲು ಒಪ್ಪಿದ್ದು, ಸಮ್ಮತಿ ಪತ್ರವನ್ನು ಸಹ ನೀಡಿರುತ್ತಾರೆ.

ಈ ಸಂಬಂಧ, ಸದರಿ ಪ್ರಸ್ತಾವನೆಯನ್ನು ಅನುಮೋದನೆಗೆ ಮಂಡಿಸಲಾಗಿದ್ದು, ದಿನಾಂಕ:07-04-2011 ರಂದು ನಡೆದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆಯ ವಿಷಯದ ಸಂಖ್ಯೆ:01/2011-12 ರಲ್ಲಿ, ಸದರಿ ಟೆಂಡರ್ ಮೊತ್ತ ರೂ.3,39,26,890.00 ಗಳಿಗೆ ಸ್ಥಾಯಿ ಸಮಿತಿ ಸಭೆಯು ಅನುಮೋದನೆ ನೀಡಲಾಗಿರುತ್ತದೆ. ಮುಂದುವರೆದಂತೆ, ಸದರಿ ಗುತ್ತಿಗೆದಾರರ ಟೆಂಡರ್ ಮೊತ್ತ ರೂ.3,39,26,890.00 ಗಳು 2010-11 ನೇ ಸಾಲಿನ ಕರ್ನಾಟಕ ಲೋಕೋಪಯೋಗಿ ಇಲಾಖೆಯ ಬೆಂಗಳೂರು ವೃತ್ತದ ದರಸೂಚಿಗೆ ಹೋಲಿಸಿದಲ್ಲಿ ಶೇಕಡ +14.98 ಹೆಚ್ಚುವರಿ ಇದ್ದು, ಸದರಿ ಮೊತ್ತವು ರೂ.3,39,26,890.00 ಗಳಾಗಿರುವುದರಿಂದ ಸದರಿ ಟೆಂಡರ್‌ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆ ಪಡೆಯಬೇಕಾಗಿದ್ದು, ಪ್ರಸ್ತಾಪಿತ ಕಾಮಗಾರಿಯ ಟೆಂಡರ್‌ಗೆ ಅನುಮೋದನೆ ಕೋರಿ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29-03-2011 ರ ಟಿಪ್ಪಣಿ.

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:29-03-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಪಿ.ಎನ್.ಸದಾಶಿವ ರವರು, ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:29-03-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:31-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ: 35/2011-12**

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೆಂಗಳೂರು ನಗರದಲ್ಲಿ ನಡೆದ ಅಖಿಲ ಭಾರತ 77ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಮಹಾನಗರ ಪಾಲಿಕೆಯ ಎಲ್ಲಾ 198 ಜನ ಸದಸ್ಯರ ಒಂದು ತಿಂಗಳ ಗೌರವ ಸಂಭಾವನೆಯನ್ನು (ಸಭಾ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಹೊರತುಪಡಿಸಿ) ವಂತಿಗೆಯಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡುವ ಬಗ್ಗೆ ಹಿಂದಿನ ಮಾನ್ಯ ಆಡಳಿತ ಪಕ್ಷದ ನಾಯಕರಾದ, ಶ್ರೀ. ಬಿ.ಎಸ್.ಸತ್ಯನಾರಾಯಣ ರವರು ದಿನಾಂಕ:01-02-2011 ರ ನಗರ ಪಾಲಿಕೆಯ ಮಾಸಿಕ ಸಭೆಯಲ್ಲಿ ತಿಳಿಸಿರುವ ಹಿನ್ನಲೆಯಲ್ಲಿ, ಮಹಾನಗರ ಪಾಲಿಕೆಯ ಎಲ್ಲಾ 198 ಜನ ಸದಸ್ಯರ ಒಂದು ತಿಂಗಳ ಗೌರವ ಸಂಭಾವನೆ (ಸಭಾ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಹೊರತುಪಡಿಸಿ) ಅವರ ಗೌರವ ಧನದಲ್ಲಿ ಕಟಾಯಿಸಿ, ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡಲು, ಪೂಜ್ಯ ಮಹಾಪೌರರ ಆದೇಶದ ರೀತ್ಯ ಈಗಾಗಲೇ ಕ್ರಮಕೈಗೊಂಡಿದ್ದು, ಕೈಗೊಂಡಿರುವ ಕ್ರಮಕ್ಕೆ ಸ್ಥಿರೀಕರಣ ನೀಡಲು ಸಭೆಯು ತೀರ್ಮಾನಿಸಿತು.

ಶ್ರೀ.ಪಿ.ಎನ್.ಸದಾಶಿವ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೆಂಗಳೂರು ನಗರದಲ್ಲಿ ನಡೆದ ಅಖಿಲ ಭಾರತ 77ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಮಹಾನಗರ ಪಾಲಿಕೆಯ ಎಲ್ಲಾ 198 ಜನ ಸದಸ್ಯರ ಒಂದು ತಿಂಗಳ ಗೌರವ ಸಂಭಾವನೆಯನ್ನು (ಸಭಾ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಹೊರತುಪಡಿಸಿ) ವಂತಿಗೆಯಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡುವ ಬಗ್ಗೆ ಹಿಂದಿನ ಮಾನ್ಯ ಆಡಳಿತ ಪಕ್ಷದ ನಾಯಕರಾದ, ಶ್ರೀ. ಬಿ.ಎಸ್.ಸತ್ಯನಾರಾಯಣ ರವರು ದಿನಾಂಕ:01-02-2011 ರ ನಗರ ಪಾಲಿಕೆಯ ಮಾಸಿಕ ಸಭೆಯಲ್ಲಿ ತಿಳಿಸಿರುವ ಹಿನ್ನಲೆಯಲ್ಲಿ, ಮಹಾನಗರ ಪಾಲಿಕೆಯ ಎಲ್ಲಾ 198 ಜನ ಸದಸ್ಯರ ಒಂದು ತಿಂಗಳ ಗೌರವ ಸಂಭಾವನೆ (ಸಭಾ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಹೊರತುಪಡಿಸಿ) ಅವರ ಗೌರವ ಧನದಲ್ಲಿ ಕಟಾಯಿಸಿ, ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡಲು, ಪೂಜ್ಯ ಮಹಾಪೌರರ ಆದೇಶದ ರೀತ್ಯ ಈಗಾಗಲೇ ಕ್ರಮಕೈಗೊಂಡಿದ್ದು, ಕೈಗೊಂಡಿರುವ ಕ್ರಮಕ್ಕೆ ಸ್ಥಿರೀಕರಣ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:31-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ: 36/2011-12**

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ದಿನಾಂಕ:05-06-2011 ರಂದು ವಿಶ್ವ ಪರಿಸರ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಈ ಹಿನ್ನಲೆಯಲ್ಲಿ ಬೆಂಗಳೂರು ಮಹಾನಗರದಲ್ಲಿ ಪರಿಸರ ಸಂರಕ್ಷಣೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ನಗರ ಪಾಲಿಕೆಯ ಸ್ವತ್ತು/ಕಟ್ಟಡಗಳ ಆವರಣಗಳಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಮಹಾನಗರ ಪಾಲಿಕೆಯ ಸದಸ್ಯರು ಈ ಕಾರ್ಯಕ್ರಮವನ್ನು ತಮ್ಮ ತಮ್ಮ ವಾರ್ಡುಗಳಲ್ಲಿ ಹಮ್ಮಿಕೊಳ್ಳಲು ಹಾಗೂ ಈ ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಎಲ್ಲಾ ಅಧಿಕಾರಿಗಳು / ನೌಕರರು ಭಾಗವಹಿಸಿ ಸಂಪೂರ್ಣ ಸಹಕಾರ ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿತು.

ಶ್ರೀ.ಪಿ.ಎನ್.ಸದಾಶಿವ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ದಿನಾಂಕ:05-06-2011 ರಂದು ವಿಶ್ವ ಪರಿಸರ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಈ ಹಿನ್ನಲೆಯಲ್ಲಿ ಬೆಂಗಳೂರು ಮಹಾನಗರದಲ್ಲಿ ಪರಿಸರ ಸಂರಕ್ಷಣೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ನಗರ ಪಾಲಿಕೆಯ ಸ್ವತ್ತು/ಕಟ್ಟಡಗಳ ಆವರಣಗಳಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಮಹಾನಗರ ಪಾಲಿಕೆಯ ಸದಸ್ಯರು ಈ ಕಾರ್ಯಕ್ರಮವನ್ನು ತಮ್ಮ ತಮ್ಮ ವಾರ್ಡುಗಳಲ್ಲಿ ಹಮ್ಮಿಕೊಳ್ಳಲು ಹಾಗೂ ಈ ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಎಲ್ಲಾ ಅಧಿಕಾರಿಗಳು / ನೌಕರರು ಭಾಗವಹಿಸಿ ಸಂಪೂರ್ಣ ಸಹಕಾರ ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:31-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ: 37/2011-12**

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಪೂಜ್ಯ ಮಹಾಪೌರರ ವೈದ್ಯಕೀಯ ನಿಧಿ ಲೆಕ್ಕ ಶೀರ್ಷಿಕೆಯಡಿ ಬಡವರಿಗೆ ಮತ್ತು ಹಿಂದುಳಿದವರಿಗೆ ಪೂಜ್ಯ ಮಹಾಪೌರರ ವೈದ್ಯಕೀಯ ಆರ್ಥಿಕ ಸಹಾಯ ನೀಡಲು ಅವಕಾಶವಿದ್ದು, ಆದರೆ, 2011-12 ನೇ ಸಾಲಿನ ಆಯವ್ಯಯವು ಇನ್ನು ಮಂಡನೆಯಾಗಿಲ್ಲದೆ ಇರುವುದರಿಂದ, ವೈದ್ಯಕೀಯ ಸಹಾಯ ಧನವನ್ನು ಮಂಜೂರು ಮಾಡಲು ಸಾಧ್ಯವಾಗಿರುವುದಿಲ್ಲ. ಆದಕಾರಣ, ಪೂಜ್ಯ ಮಹಾಪೌರರು ಅನುಮೋದನೆ ನೀಡುವ ವೈದ್ಯಕೀಯ ಧನ ಸಹಾಯ ಪ್ರಕರಣಗಳಿಗೆ ಹಣವನ್ನು ಬಿಡುಗಡೆ ಮಾಡಲು ಅನುಕೂಲವಾಗುವಂತೆ ರೂ.50.00 ಲಕ್ಷಗಳನ್ನು (ಆಯವ್ಯಯದಲ್ಲಿ ಮೀಸಲಿಡುವ ಮೊತ್ತದಲ್ಲಿ ಕಟಾಯಿಸುವ ಷರತ್ತಿಗೆ ಒಳಪಟ್ಟು) ಕೂಡಲೇ ಪೂಜ್ಯ ಮಹಾಪೌರರ ವೈದ್ಯಕೀಯ ಪರಿಹಾರ ನಿಧಿಗೆ ಅನುದಾನವನ್ನು ಬಿಡುಗಡೆ ಮಾಡಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿತು.

ಶ್ರೀ.ಪಿ.ಎನ್.ಸದಾಶಿವ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಪೂಜ್ಯ ಮಹಾಪೌರರ ವೈದ್ಯಕೀಯ ನಿಧಿ ಲೆಕ್ಕ ಶೀರ್ಷಿಕೆಯಡಿ ಬಡವರಿಗೆ ಮತ್ತು ಹಿಂದುಳಿದವರಿಗೆ ಪೂಜ್ಯ ಮಹಾಪೌರರ ವೈದ್ಯಕೀಯ ಆರ್ಥಿಕ ಸಹಾಯ ನೀಡಲು ಅವಕಾಶವಿದ್ದು, ಆದರೆ, 2011-12 ನೇ ಸಾಲಿನ ಆಯವ್ಯಯವು ಇನ್ನು ಮಂಡನೆಯಾಗಿಲ್ಲದೆ ಇರುವುದರಿಂದ, ವೈದ್ಯಕೀಯ ಸಹಾಯ ಧನವನ್ನು ಮಂಜೂರು ಮಾಡಲು ಸಾಧ್ಯವಾಗಿರುವುದಿಲ್ಲ. ಆದಕಾರಣ, ಪೂಜ್ಯ ಮಹಾಪೌರರು ಅನುಮೋದನೆ ನೀಡುವ ವೈದ್ಯಕೀಯ ಧನ ಸಹಾಯ ಪ್ರಕರಣಗಳಿಗೆ ಹಣವನ್ನು ಬಿಡುಗಡೆ ಮಾಡಲು ಅನುಕೂಲವಾಗುವಂತೆ ರೂ.50.00 ಲಕ್ಷಗಳನ್ನು (ಆಯವ್ಯಯದಲ್ಲಿ ಮೀಸಲಿಡುವ ಮೊತ್ತದಲ್ಲಿ ಕಟಾಯಿಸುವ ಷರತ್ತಿಗೆ ಒಳಪಟ್ಟು) ಕೂಡಲೇ ಪೂಜ್ಯ ಮಹಾಪೌರರ ವೈದ್ಯಕೀಯ ಪರಿಹಾರ ನಿಧಿಗೆ ಅನುದಾನವನ್ನು ಬಿಡುಗಡೆ ಮಾಡಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

# ದಿನಾಂಕ:31–05–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 38/2011–12

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ/ನೌಕರರುಗಳ ಹಲವಾರು ಸ್ವಯಂ ಘೋಷಿತ ಸಂಘಗಳಿದ್ದು, ಈ ಸಂಘಗಳ ಪೈಕಿ ಎರಡು ಸಂಘಗಳ ಸ್ವಯಂ ಘೋಷಿತ ಪದಾಧಿಕಾರಿಗಳು ಪರಸ್ಪರ ಕಿತ್ತಾಟದಲ್ಲಿ ತೊಡಗಿದ್ದು, ಒಬ್ಬರ ವಿರುದ್ಧ ಮತ್ತೊಬ್ಬರು ಪೊಲೀಸ್ ಠಾಣೆಯಲ್ಲಿ ದೂರುಗಳನ್ನು ಸಲ್ಲಿಸಿರುತ್ತಾರೆ. ಇದು ನಗರ ಪಾಲಿಕೆಯ ಹಿತದೃಷ್ಟಿಯಿಂದ ಉತ್ತಮ ಬೆಳವಣಿಗೆಯಾಗಿರುವುದಿಲ್ಲ. ಈ ಸಂಘಗಳಿಗೆ ಇಲ್ಲಿಯವರೆವಿಗೆ ಚುನಾವಣೆಯು ಸಹ ನಡೆದಿರುವುದಿಲ್ಲ. ಈ ಹಿನ್ನಲೆಯಲ್ಲಿ, ಮಾನ್ಯ ಆಯುಕ್ತರು, ಎಲ್ಲಾ ಪಕ್ಷದ ನಾಯಕರು ಹಾಗೂ ನಗರ ಪಾಲಿಕೆಯ ಅಪರ ಆಯುಕ್ತರು (ಆಡಳಿತ) ರವರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ, ಅಧಿಕಾರಿ / ನೌಕರರಿಗೆ ಒಂದು ಸಂಘ ಮತ್ತು ಪೌರ ಕಾರ್ಮಿಕರು ಹಾಗೂ ಆರೋಗ್ಯ ಗ್ಯಾಂಗ್‌ಮೆನ್‌ರವರಿಗೆ ಒಂದು ಸಂಘ (ಎರಡು ಪ್ರತ್ಯೇಕ ಸಂಘಗಳು). ಈ ಸಂಘಗಳಿಗೆ ಮಾತ್ರ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವುದು. ಚುನಾಯಿತ ಸಂಘಗಳಿಗೆ ಮಾತ್ರ ಮಾನ್ಯತೆ ನೀಡಲು ಕೋರುತ್ತಾ, ಚುನಾವಣೆ ಪ್ರಕ್ರಿಯೆ ಮುಗಿಯುವವರೆವಿಗೆ, ಸಂಘಗಳಿಗೆ ಹಾಲಿ ನೀಡಿರುವ ಎಲ್ಲಾ ರೀತಿಯ ಸವಲತ್ತುಗಳನ್ನು ಆಯುಕ್ತರು ಹಿಂಪಡೆಯುವುದು ಮತ್ತು ಸ್ವಯಂಘೋಷಿತ ಸಂಘಗಳ ಪದಾಧಿಕಾರಿಗಳಿಗೆ ಯಾವುದೇ ಮಾನ್ಯತೆ ನೀಡದಂತೆ ಎಲ್ಲಾ ಅಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸುವಂತೆ ಆಯುಕ್ತರವರಿಗೆ ಸೂಚಿಸಲು ಸಭೆಯು ತೀರ್ಮಾನಿಸಿತು.

ಶ್ರೀ.ಪಿ.ಎನ್.ಸದಾಶಿವ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ/ನೌಕರರುಗಳ ಹಲವಾರು ಸ್ವಯಂ ಘೋಷಿತ ಸಂಘಗಳಿದ್ದು, ಈ ಸಂಘಗಳ ಪೈಕಿ ಎರಡು ಸಂಘಗಳ ಸ್ವಯಂ ಘೋಷಿತ ಪದಾಧಿಕಾರಿಗಳು ಪರಸ್ಪರ ಕಿತ್ತಾಟದಲ್ಲಿ ತೊಡಗಿದ್ದು, ಒಬ್ಬರ ವಿರುದ್ಧ ಮತ್ತೊಬ್ಬರು ಪೊಲೀಸ್ ಠಾಣೆಯಲ್ಲಿ ದೂರುಗಳನ್ನು ಸಲ್ಲಿಸಿರುತ್ತಾರೆ. ಇದು ನಗರ ಪಾಲಿಕೆಯ ಹಿತದೃಷ್ಟಿಯಿಂದ ಉತ್ತಮ ಬೆಳವಣಿಗೆಯಾಗಿರುವುದಿಲ್ಲ. ಈ ಸಂಘಗಳಿಗೆ ಇಲ್ಲಿಯವರೆವಿಗೆ ಚುನಾವಣೆಯು ಸಹ ನಡೆದಿರುವುದಿಲ್ಲ. ಈ ಹಿನ್ನಲೆಯಲ್ಲಿ, ಮಾನ್ಯ ಆಯುಕ್ತರು, ಎಲ್ಲಾ ಪಕ್ಷದ ನಾಯಕರು ಹಾಗೂ ನಗರ ಪಾಲಿಕೆಯ ಅಪರ ಆಯುಕ್ತರು (ಆಡಳಿತ) ರವರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ, ಅಧಿಕಾರಿ / ನೌಕರರಿಗೆ ಒಂದು ಸಂಘ ಮತ್ತು ಪೌರ ಕಾರ್ಮಿಕರು ಹಾಗೂ ಆರೋಗ್ಯ

.......................2

ಗ್ಯಾಂಗ್‌ಮೆನ್‌ರವರಿಗೆ ಒಂದು ಸಂಘ (ಎರಡು ಪ್ರತ್ಯೇಕ ಸಂಘಗಳು). ಈ ಸಂಘಗಳಿಗೆ ಮಾತ್ರ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವುದು. ಚುನಾಯಿತ ಸಂಘಗಳಿಗೆ ಮಾತ್ರ ಮಾನ್ಯತೆ ನೀಡಲು ಕೋರುತ್ತಾ, ಚುನಾವಣೆ ಪ್ರಕ್ರಿಯೆ ಮುಗಿಯುವವರೆವಿಗೆ, ಸಂಘಗಳಿಗೆ ಹಾಲಿ ನೀಡಿರುವ ಎಲ್ಲಾ ರೀತಿಯ ಸವಲತ್ತುಗಳನ್ನು ಆಯುಕ್ತರು ಹಿಂಪಡೆಯುವುದು ಮತ್ತು ಸ್ವಯಂಘೋಷಿತ ಸಂಘಗಳ ಪದಾಧಿಕಾರಿಗಳಿಗೆ ಯಾವುದೇ ಮಾನ್ಯತೆ ನೀಡದಂತೆ ಎಲ್ಲಾ ಅಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸುವಂತೆ ಆಯುಕ್ತರವರಿಗೆ ಸೂಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು

## ದಿನಾಂಕ:31-05-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

### ವಿಷಯದ ಸಂಖ್ಯೆ: 39/2011-12

ಶ್ರೀ.ಬಿ.ಆರ್.ನಂಜುಂಡಪ್ಪ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಟಿ.ಡಿ.ಆರ್/ಭೂಸ್ವಾಧೀನ ಕಾರ್ಯಗಳಿಗಾಗಿ ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ/ನೌಕರರುಗಳನ್ನು ಕೆ.ಎಂ.ಸಿ. ಕಾಯ್ದೆ 1976 ರ ನಿಯಮ 20(ಎ) ರನ್ವಯ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಕ್ರೋಢೀಕೃತ ಮಾಸಿಕ ವೇತನದ (ಸಂಚಿತ ವೇತನ) ಆಧಾರದ ಮೇಲೆ ದಿನಾಂಕ: 03-03-2010 ರಂದು ನೇಮಕ ಮಾಡಿಕೊಂಡು, ಕರ್ತವ್ಯಕ್ಕೆ ನಿಯುಕ್ತಿಗೊಳಿಸಲಾಗಿತ್ತು. ಒಂದು ವರ್ಷದ ಗುತ್ತಿಗೆ ಅವಧಿಯು ದಿನಾಂಕ:02-03-2011 ಕ್ಕೆ ಅಂತ್ಯವಾಗಿರುತ್ತದೆ ಹಾಗೂ ನಗರ ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಸದರಿ ಸಿಬ್ಬಂದಿಯನ್ನು ಪಾಲಿಕೆಯಲ್ಲಿ ಮುಂದುವರೆಸಲಾಗಿದೆ. ಭೂಸ್ವಾಧೀನ ಹಾಗೂ ಟಿ.ಡಿ.ಆರ್. ಕಾರ್ಯ ನಿರ್ವಹಣೆಗಾಗಿ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರುಗಳ ಸೇವೆಯು ಪಾಲಿಕೆಗೆ ಅತ್ಯಗತ್ಯವಾಗಿ ಬೇಕಾಗಿದ್ದು, ಇವರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯವುದು ಮೊದಲೋ ಅಲ್ಲಿಯವರೆಗೆ ಗೌರವ ಧನವನ್ನು (ಸಂಚಿತ ವೇತನ) ನೀಡಿ, ದಿನಾಂಕ:03-03-2011 ರಿಂದ ಜಾರಿಗೆ ಬರುವಂತೆ ಮರುನೇಮಕ ಮಾಡಿಕೊಳ್ಳಲು ಯೋಜಿಸಿ, ಕಡತವನ್ನು ಸಂಬಂಧಪಟ್ಟ ಸಮಿತಿಗಳಿಗೆ ಕಳುಹಿಸಲಾಗಿದೆ. ಮಾರ್ಚ್-2011 ರಿಂದ ಸದರಿ ನಿವೃತ್ತ ಅಧಿಕಾರಿ/ನೌಕರರಿಗೆ ಗೌರವ ಧನವನ್ನು ಸಹ ನೀಡಿರುವುದಿಲ್ಲ. ಈ ಹಿನ್ನಲೆಯಲ್ಲಿ, ಸಮಿತಿಯಿಂದ ಕಡತ ಮಂಡಿಸಿ, ಕೌನ್ಸಿಲ್ ಸಭೆಯಲ್ಲಿ ತೀರ್ಮಾನವನ್ನು ಕೈಗೊಳ್ಳುವವರೆವಿಗೆ ಮಾರ್ಚ್-2011 ರಿಂದ ಅನ್ವಯವಾಗುವಂತೆ ಸದರಿ ಸಿಬ್ಬಂದಿಗೆ ಈಗಾಗಲೇ ನೀಡುತ್ತಿರುವ ಗೌರವಧನವನ್ನೇ ನೀಡಿ, ಸದರಿಯವರ ಸೇವೆಯನ್ನು ಮುಂದುವರೆಸುವಂತೆ ಮಾನ್ಯ ಆಯುಕ್ತರವರಿಗೆ ಸೂಚಿಸಲು ಸಭೆಯು ತೀರ್ಮಾನಿಸಿತು.

ಶ್ರೀ.ಪಿ.ಎನ್.ಸದಾಶಿವ ರವರು ಶ್ರೀ.ಬಿ.ಆರ್.ನಂಜುಂಡಪ್ಪ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಟಿ.ಡಿ.ಆರ್/ಭೂಸ್ವಾಧೀನ ಕಾರ್ಯಗಳಿಗಾಗಿ ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ/ನೌಕರರುಗಳನ್ನು ಕೆ.ಎಂ.ಸಿ. ಕಾಯ್ದೆ 1976 ರ ನಿಯಮ 20(ಎ) ರನ್ವಯ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಕ್ರೋಢೀಕೃತ ಮಾಸಿಕ ವೇತನದ (ಸಂಚಿತ ವೇತನ) ಆಧಾರದ ಮೇಲೆ ದಿನಾಂಕ: 03-03-2010 ರಂದು

......................2

ನೇಮಕ ಮಾಡಿಕೊಂಡು, ಕರ್ತವ್ಯಕ್ಕೆ ನಿಯುಕ್ತಿಗೊಳಿಸಲಾಗಿತ್ತು. ಒಂದು ವರ್ಷದ ಗುತ್ತಿಗೆ ಅವಧಿಯು ದಿನಾಂಕ:02-03-2011 ಕ್ಕೆ ಅಂತ್ಯವಾಗಿರುತ್ತದೆ ಹಾಗೂ ನಗರ ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಸದರಿ ಸಿಬ್ಬಂದಿಯನ್ನು ಪಾಲಿಕೆಯಲ್ಲಿ ಮುಂದುವರೆಸಲಾಗಿದೆ. ಭೂಸ್ವಾಧೀನ ಹಾಗೂ ಟಿ.ಡಿ.ಆರ್. ಕಾರ್ಯ ನಿರ್ವಹಣೆಗಾಗಿ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರುಗಳ ಸೇವೆಯು ಪಾಲಿಕೆಗೆ ಅತ್ಯಗತ್ಯವಾಗಿ ಬೇಕಾಗಿದ್ದು, ಇವರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯವುದು ಮೊದಲೋ ಅಲ್ಲಿಯವರೆಗೆ ಗೌರವ ಧನವನ್ನು (ಸಂಚಿತ ವೇತನ) ನೀಡಿ, ದಿನಾಂಕ:03-03-2011 ರಿಂದ ಜಾರಿಗೆ ಬರುವಂತೆ ಮರುನೇಮಕ ಮಾಡಿಕೊಳ್ಳಲು ಯೋಜಿಸಿ, ಕಡತವನ್ನು ಸಂಬಂಧಪಟ್ಟ ಸಮಿತಿಗಳಿಗೆ ಕಳುಹಿಸಲಾಗಿದೆ. ಮಾರ್ಚ್-2011 ರಿಂದ ಸದರಿ ನಿವೃತ್ತ ಅಧಿಕಾರಿ/ನೌಕರರಿಗೆ ಗೌರವ ಧನವನ್ನು ಸಹ ನೀಡಿರುವುದಿಲ್ಲ. ಈ ಹಿನ್ನಲೆಯಲ್ಲಿ, ಸಮಿತಿಯಿಂದ ಕಡತ ಮಂಡಿಸಿ, ಕೌನ್ಸಿಲ್ ಸಭೆಯಲ್ಲಿ ತೀರ್ಮಾನವನ್ನು ಕೈಗೊಳ್ಳುವವರೆವಿಗೆ ಮಾರ್ಚ್-2011 ರಿಂದ ಅನ್ವಯವಾಗುವಂತೆ ಸದರಿ ಸಿಬ್ಬಂದಿಗೆ ಈಗಾಗಲೇ ನೀಡುತ್ತಿರುವ ಗೌರವಧನವನ್ನೇ ನೀಡಿ, ಸದರಿಯವರ ಸೇವೆಯನ್ನು ಮುಂದುವರೆಸುವಂತೆ ಮಾನ್ಯ ಆಯುಕ್ತರವರಿಗೆ ಸೂಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಶಾರದಮ್ಮ
(ಶಾರದಮ್ಮ)
ಮಹಾಪೌರರು.